For more job news visit : www.kpscvaani.com

ಕರ್ನಾಟಕ ಸರ್ಕಾರ

ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯಾದಗಿರಿ

ಕೋಣೆ ಸಂ:–ಸಿ(17), ಸಿ–ಬ್ಲಾಕ್ ಒಂದನೇ ಮಹಡಿ, ಜಿಲ್ಲಾ ಆಡಳಿತ ಭವನ ಸಂಕೀರ್ಣ, ಚಿತ್ತಾಪೂರ ರಸ್ತೆ, ಯಾದಗಿರಿ.

Email_ID : ddwcdyad@gmail.com ಫೋನ್ : 08473–253739

ಸಂಖ್ಯೆ:ಉನಿಯಾ/ಮಮಅಇ/ಅಂ.ಕಾ.ಕ/ಅಂ.ಸ/ನೇಮಕಾತಿ/01/2026–27 ದಿನಾಂಕ:23/07/2026

–: ಅಧಿಸೂಚನೆ :–

ಸರ್ಕಾರದ ಆದೇಶ ಸಂಖ್ಯೆ : ಮಮಇ 154 ಐಸಿಡಿ 2020, ಬೆಂಗಳೂರು, ದಿನಾಂಕ : 03/12/2022 ಮತ್ತು ಮಾರ್ಪಾಡು ಆದೇಶ ಸಂಖ್ಯೆ : ಮಮಇ 154 ಐಸಿಡಿ 2020, ಬೆಂಗಳೂರು, ದಿನಾಂಕ : 18/11/2024 ರ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ನೇಮಕಾತಿಯ ಮಾರ್ಗಸೂಚಿಯಂತೆ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಯಾದಗಿರಿರವರ ಅನುಮೋದನೆಯಂತೆ, ಯಾದಗಿರಿ ಜಿಲ್ಲೆಯ 04 ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಈ ಕೆಳಗಿನಂತೆ ಖಾಲಿ ಇರುವ ಹುದ್ದೆಗಳನ್ನು ಆನ್ ಲೈನ್ ಮೂಲಕ ನೇಮಕಾತಿ ಕೈಗೊಳ್ಳಲು ಅನುಮತಿಸಲಾಗಿದೆ.

ಕ್ರ.ಸಂ	ಯೋಜನೆಯ ಹೆಸರು	ಅಂಗನವಾಡಿ ಕಾರ್ಯಕರ್ತೆ	ಅಂಗನವಾಡಿ ಸಹಾಯಕಿ
1	**2**	**3**	**4**
1.	ಶಹಾಪೂರ	12	58
2.	ಸುರಪುರ	24	58
3.	ಯಾದಗಿರಿ	16	30
4.	ಗುರುಮಠಕಲ್	09	25
ಒಟ್ಟು		**61**	**171**

ಈ ಮೇಲಿನಂತೆ ಒಟ್ಟು 61–ಅಂಗನವಾಡಿ ಕಾರ್ಯಕರ್ತೆಯರ(ಅನುಬಂಧ–01), ಹಾಗೂ 171–ಅಂಗನವಾಡಿ ಸಹಾಯಕಿಯರ(ಅನುಬಂಧ–02)ಯರ ಗೌರವ ಸೇವೆಯ ಹುದ್ದೆಗಳನ್ನು ಸರ್ಕಾರದ ನೇಮಕಾತಿಯ ಮಾರ್ಗಸೂಚಿಯಂತೆ ಭರ್ತಿ ಮಾಡಲು, ಆನ್‌ಲೈನ್ ಮೂಲಕ **ಜಿಲ್ಲಾಡಳಿತ, ಯಾದಗಿರ ವೆಬ್ ಸೈಟ್ : https://yadgir.nic.in/ ಅಥವಾ ಜಿಲ್ಲಾ ಪಂಚಾಯತ್, ಯಾದಗಿರ ವೆಬ್ ಸೈಟ್ : https://zpyadgiri.karnataka.gov.in/** ನಲ್ಲಿ ಅಧಿಸೂಚನೆಯಲ್ಲಿನ ಲಿಂಕ್‌ನ್ನು ಬಳಸಿ ಅರ್ಜಿಯನ್ನು ಸಲ್ಲಿಸುವುದು. ಈ ಕೆಳಗಿನ ಮಾರ್ಗಸೂಚಿ/ನಿಬಂಧನೆಗಳು ತಿಳಿಸಿರುವಂತೆ, ಅರ್ಹ ಮಹಿಳಾ ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು,

ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ: 24–07–2026 ರಿಂದ ದಿನಾಂಕ: 24–08–2026ರ ವರೆಗೆ ನಿಗದಿಪಡಿಸಲಾಗಿರುತ್ತದೆ.

ಸೂಚನೆಗಳು :

1) ಸರ್ಕಾರದ ಆದೇಶ ಸಂಖ್ಯೆ : ಮಮಇ 154 ಐಸಿಡಿ 2020, ಬೆಂಗಳೂರು, ದಿನಾಂಕ : 03/12/2022 ಮತ್ತು ಮಾರ್ಪಾಡು ಆದೇಶ ಸಂಖ್ಯೆ : ಮಮಇ 154 ಐಸಿಡಿ 2020, ಬೆಂಗಳೂರು, ದಿನಾಂಕ : 18/11/2024 ರ ಮಾರ್ಗಸೂಚಿಯಂತೆ ನೇಮಕಾತಿ ಕೈಗೊಳ್ಳಲಾಗುವುದು.
2) ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗಳಿಗೆ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಇತರೇ ಯಾವುದೇ ಮೂಲದಿಂದ ಸಲ್ಲಿಸಲು ಅವಕಾಶವಿರುವುದಿಲ್ಲ, ಅವುಗಳನ್ನು ಪರಿಗಣಿಸಲಾಗುವುದಿಲ್ಲ.
3) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಈ ಕೆಳಗಿನ ನೇಮಕಾತಿಯ ಮಾರ್ಗಸೂಚಿ/ ನಿಬಂಧನೆಗಳನ್ನು ಸ್ಪಷ್ಟವಾಗಿ ಓದಿಕೊಂಡು, ನೀಡಲಾಗಿರುವ ಸೂಚನೆಯಂತೆ ಅರ್ಜಿಗಳನ್ನು ಭರ್ತಿ ಮಾಡಿ, ಅವಶ್ಯಕ ಮೂಲ ದಾಖಲೆಗಳನ್ನು ಸ್ಪಷ್ಟವಾಗಿ ಸ್ಕ್ಯಾನ್ ಮಾಡಿ, ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸುವುದು.

For more job news visit : www.kpscvaani.com

4) ಆನ್‌ಲೈನ್ ಮೂಲಕವೇ ಎಲ್ಲಾ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು. ತದನಂತರ ಸಲ್ಲಿಸುವ ದಾಖಲಾತಿಗಳನ್ನು ಪರಿಗಣಿಸುವುದಿಲ್ಲ.

ಮಾರ್ಗಸೂಚಿ/ನಿಬಂಧನೆಗಳು :

1. **ಅರ್ಹತೆ:** ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

2. **ವಯೋಮಿತಿ:** ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಲು 19–35 ವರ್ಷ ವಯೋಮಿತಿಯೊಳಗಿನ ಹೆಣ್ಣು ಮಕ್ಕಳು ಹಾಗೂ ಮಹಿಳಾ ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು ಹಾಗೂ ವಿಕಲಚೇತನರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

3. **ಸ್ಥಳೀಯತೆ:**

   i) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಸಂಬಂಧಿಸಿದಂತೆ ಗ್ರಾಮಾಂತರ ಪ್ರದೇಶದ ಕೇಂದ್ರವಾದಲ್ಲಿ ಆಯಾ ಕಂದಾಯ ಗ್ರಾಮದಲ್ಲಿ ವಾಸ್ತವ್ಯ ಹೊಂದಿರಬೇಕು. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಗೆ ಸ್ಥಳೀಯ ಮಜಿರೆ, ತಾಂಡಾ ಹಾಗೂ ಹಾಡಿಗೆ ಸೇರಿದವರಾಗಿದ್ದರೆ ಸಂಬಂಧಿಸಿದ ವಾಸ್ತವ್ಯ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು.

   ii) ನಗರ ಪ್ರದೇಶದ ಅಂಗನವಾಡಿ ಕೇಂದ್ರದಲ್ಲಿ ಆಯಾ ಕಂದಾಯ ವಾರ್ಡ್‌ನಲ್ಲಿ ವಾಸ್ತವ್ಯ ಹೊಂದಿರಬೇಕು ಹಾಗೂ ವಾಸಸ್ಥಳ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು. [ಚುನಾವಣಾ ವಾರ್ಡಗಳನ್ನು ಪರಿಗಣಿಸುವಂತಿಲ್ಲ]

   iii) ತಹಶೀಲ್ದಾರರು/ಉಪ–ತಹಶೀಲ್ದಾರರಿಂದ **ಮೂರು ವರ್ಷದ ವಾಸ್ತವ್ಯ ದೃಢೀಕರಣದೊಂದಿಗೆ** ಸ್ಥಳೀಯರು ಎಂಬುದನ್ನು ದೃಢೀಕರಿಸಲು ವಾಸಸ್ಥಳ ಪ್ರಮಾಣ ಪತ್ರವನ್ನು ಪೂರಕ ದಾಖಲೆಗಳಾದ ಆಧಾರ ಕಾರ್ಡ್, ರೇಷನ್ ಕಾರ್ಡ್ ಮತದಾರರ ಗುರುತಿನ ಚೀಟಿಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

4. **ವಿದ್ಯಾರ್ಹತೆ:**

   1. ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ ಪಿ.ಯು.ಸಿ. ತೇರ್ಗಡೆ ಹೊಂದಿರಬೇಕು. ಎಸ್.ಎಸ್.ಎಲ್.ಸಿ. ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಓದಿರಬೇಕು.
   2. ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಂದರ್ಭದಲ್ಲಿ "ಸರ್ಕಾರದ ಅಂಗೀಕೃತ ಸಂಸ್ಥೆಗಳಿಂದ D.S.E.R.T ಯಿಂದ ECCE ಡಿಪ್ಲೋಮಾ ಕೋರ್ಸ್, JOC ಕೋರ್ಸ್, NTT ಕೋರ್ಸ್‌ಗಳನ್ನು ಹಾಗೂ ಅಂಗನವಾಡಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಡಿಪ್ಲೋಮಾ ನ್ಯೂಟ್ರಿಷಿಯನ್, ಹೋಂ ಸೈನ್ಸ್ ಸರ್ಟಿಫಿಕೆಟ್ ಕೋರ್ಸ, ಒಂದು ವರ್ಷದ ನರ್ಸರಿ ಅಥವಾ ಪೂರ್ವ ಪ್ರಾಥಮಿಕ ತರಬೇತಿ ಪಡೆದು ಪ್ರಮಾಣ ಪತ್ರ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು ಹಾಗೂ ಸದರಿಯವರಿಗೆ ಬೋನಸ್ +5 ಅಂಕಗಳನ್ನು ನೀಡಲಾಗುವುದು.

5. **ಅಂಗನವಾಡಿ ಸಹಾಯಕಿ ವಿದ್ಯಾರ್ಹತೆ:** ಹುದ್ದೆಗೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ತರಗತಿಯಲ್ಲಿ ಉತ್ತೀರ್ಣವಾಗಿರಬೇಕು.

- ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ/ಮುಕ್ತ ವಿದ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ/ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜ ಶಾಸ್ತ್ರ/ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು ಪ್ರಮಾಣ ಪತ್ರ/ಅಂಕಪಟ್ಟಿಯು ಗರಿಷ್ಠ 625 ಕನಿಷ್ಠ 219 ಅಂಕಗಳನ್ನು ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.
- ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ್ದರೂ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಆ ರಾಜ್ಯದಲ್ಲಿ ನಿಗದಿಪಡಿಸಲಾದ ಗರಿಷ್ಠ ಹಾಗೂ ಕನಿಷ್ಠ ಅಂಕದಲ್ಲಿ ವ್ಯತ್ಯಾಸವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.

For more job news visit : www.kpscvaani.com

- ಅಂಗನವಾಡಿ ಸಹಾಯಕಿಯರು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹ ಅವರು ಕನ್ನಡ ಭಾಷೆಯನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು. ಹಾಗೂ ಮಾತೃಭಾಷೆ ಕನ್ನಡವಲ್ಲದೇ ಇರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯು ಆಯ್ಕೆ ಸಮಯದಲ್ಲಿ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಭಾಷೆಯ ಜ್ಞಾನದ ಕುರಿತಂತೆ ಓದಿಸಿ, ಬರೆಸಿ ಅವರ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಿ ಅವರನ್ನು ಆಯ್ಕೆ ಮಡುವ ಬಗ್ಗೆ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಿಂದ ನಿರ್ಧರಿಸಲಾಗುವುದು.

6. ಹುದ್ದೆಯ ಮೀಸಲಾತಿ :

- ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗೆ ಶೇ. 25 ರಷ್ಟು ಅಲ್ಪಸಂಖ್ಯಾತ ಸಮುದಾಯದ ಜನಸಂಖ್ಯೆ ಇರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನು ಕಾರ್ಯಕರ್ತೆ/ಸಹಾಯಕಿಯ ಹುದ್ದೆಗೆ ಆಯ್ಕೆ ಮಾಡಲಾಗುವುದು. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯ ಹುದ್ದೆಗೆ ಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕಗಳಿಸಿದ್ದಲ್ಲಿ, ವಯೋಹಿರಿತನ ಹೊಂದಿರುವವರನ್ನು ಪರಿಗಣಿಸಲಾಗುವುದು. ಒಂದುವೇಳೆ ವಯಸ್ಸು ಸಮಾನವಾಗಿದ್ದಲ್ಲಿ, ವಿಚ್ಛೇದಿತರಿದ್ದಲ್ಲಿ ಅವರನ್ನು ಪರಿಗಣಿಸಲಾಗುತ್ತದೆ.
- ಹುದ್ದೆ ಖಾಲಿ ಇರುವ ಸ್ಥಳ, ಆ ಹುದ್ದೆ ಜನಸಂಖ್ಯೆ ಆಧಾರದಲ್ಲಿ ಯಾವ ವರ್ಗಕ್ಕೆ ಮೀಸಲಾಗಿದೆಯೋ ಆ ವರ್ಗಕ್ಕೆ ಒಳಪಡುವ ಅಭ್ಯರ್ಥಿಗಳ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

7. ಮೀಸಲಾತಿ ನಿಗದಿ:

i) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳು ಗೌರವ ಸೇವೆಗೆ ಸೇರಿದ್ದು, ಸರ್ಕಾರಿ ಹುದ್ದೆಗಳ ಮೀಸಲಾತಿ ತತ್ವಗಳು ಅನ್ವಯಿಸುವುದಿಲ್ಲ. ಅಂಗನವಾಡಿ ಕೇಂದ್ರ ಪ್ರಾರಂಭಿಸುವ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ/ನಗರ ಪ್ರದೇಶದ ಕಂದಾಯ , ವಾರ್ಡನ ಒಟ್ಟು ಜನಸಂಖ್ಯೆಗೆ ಮತ್ತು ಒಂದೇ ಗ್ರಾಮ/ವಾರ್ಡನಲ್ಲಿ ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿದ್ದಾಗ, ಅಂಗನವಾಡಿ ಕೇಂದ್ರದ ವ್ಯಾಪ್ತಿಯ ಜನಸಂಖ್ಯೆಗೆ ಶೇ.40 ಕ್ಕಿಂತ ಹೆಚ್ಚು ಪರಿಶಿಷ್ಟ ವರ್ಗದವರನ್ನು ಒಳಗೊಂಡಿದ್ದ ಸಂದರ್ಭದಲ್ಲಿ, ಈ ವರ್ಗಗಳ ಪೈಕಿ ಅತೀ ಹೆಚ್ಚು ಜನಸಂಖ್ಯೆಯಿರುವ ವರ್ಗದವರಿಗೆ ಕಾರ್ಯಕರ್ತೆ/ಸಹಾಯಕಿ ಹುದ್ದೆಯನ್ನು ಮೀಸರಿಸಲಾಗುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಾರ್ಯಕರ್ತೆ/ಸಹಾಯಕಿ ಹುದ್ದೆ ಮೀಸಲಿಟ್ಟ ಕೇಂದ್ರಗಳಲ್ಲಿ ಆ ವರ್ಗಕ್ಕೆ ಸೇರಿದವರನ್ನು ಮಾತ್ರ ಆಯ್ಕೆ ಮಾಡಲಾಗುವುದು.

ii) 25% ಕ್ಕಿಂತ ಹೆಚ್ಚು ಅಲ್ಪ ಸಂಖ್ಯಾತ (ಮುಸ್ಲಿಮರು, ಕ್ರಿಶ್ಚಿಯನ್ನರು, ಜೈನರು, ಬೌದ್ಧರು, ಪಾರ್ಸಿಗಳು ಮತ್ತು ಸಿಖ್ಖರು) ಜನಸಂಖ್ಯೆ ಇರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನು ಕಾರ್ಯಕರ್ತೆ/ಸಹಾಯಕಿಯ ಹುದ್ದೆಗೆ ಆಯ್ಕೆ ಮಾಡಲಾಗುವುದು.

8. ಆಯ್ಕೆಯ ಆದ್ಯತೆಗಳು :

1. **ಆ್ಯಸೀಡ್ ದಾಳಿಗೆ ತುತ್ತಾದ ಮಹಿಳೆಯರ ಆಯ್ಕೆ:** ಆಸೀಡ್ ದಾಳಿಗೆ ತುತ್ತಾದ ಮಹಿಳೆ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಹ ಅಭ್ಯರ್ಥಿಗೆ 05 ಬೋನಸ್ ಅಂಕಗಳನ್ನು ನೀಡಲಾಗುವುದು.

2. **ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ:** ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳ ನಿವಾಸಿಗಳು ಕನಿಷ್ಟ 03 ವರ್ಷ ಸಂಸ್ಥೆಯಲ್ಲಿರಬೇಕು ಹಾಗೂ ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ನಿವಾಸಿ ಪ್ರಮಾಣ ಪತ್ರ ನೇಮಕಾತಿ ಪ್ರಕ್ರೀಯೆಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ 10 ಬೋನಸ್ ಅಂಕಗಳನ್ನು ನೀಡಲಾಗುವುದು. ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುವ ಆ ಜಿಲ್ಲೆಯಲ್ಲಿ ಎಲ್ಲಿಯಾದರೂ ಅರ್ಜಿ ಸಲ್ಲಿಬಹುದಾಗಿರುತ್ತದೆ.

For more job news visit : www.kpscvaani.com

3. **ವಿಧವೆಯರ ಆಯ್ಕೆ:** ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಆಸಿಡ್ ದಾಳಿಗೆ ಒಳಗಾದವರು ಮತ್ತು ಇಲಾಖಾ ಸಂಸ್ಥೆಗಳ ನಿವಾಸಿಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೇ ಮೂರನೇ ಆದ್ಯತೆ ಮೇರೆಗೆ ನೇರವಾಗಿ ವಿಧವೆಯರನ್ನೆ ಆಯ್ಕೆಮಾಡತಕ್ಕದ್ದು, ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಪರಿಗಣಿಸಲಾಗುವುದಿಲ್ಲಾ.

ವಿಧವೆಯರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧೆವೆಗೆ) ಪ್ರಥಮ ಆದ್ಯತೆ ನೀಡತಕ್ಕದ್ದು. ವಿಧೆವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ದೃಡೀಕರಣವನ್ನು ಸಲ್ಲಿಸಿರುತ್ತಾರೆ, ಆ ದೃಡೀಕರಣವನ್ನು ಸಲ್ಲಿಸಿರುತ್ತಾರೆ, ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು. ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು. ವಿಧವೆಯರು ಪತಿಯ ಮರಣ ಪ್ರಮಾಣ ಪತ್ರ ಅಥವಾ ವಿಧವಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.

4. **ಅಂಗವಿಕಲರ ಆಯ್ಕೆ:** ಇತರೆ ದೈಹಿಕ ಅಂಗವಿಕಲತೆ ಶೇ40% ಮೀರದಂತೆ ಇರುವವರು, ಅರ್ಜಿ ಸಲ್ಲಿಸಬಹುದಾಗಿದೆ. ಅಂಗಿಕೃತ ಪ್ರಾಧಿಕಾರ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ/ UDID ಕಾರ್ಡ ಅರ್ಜಿಯೊಂದಿಗೆ ಲಗತ್ತಿಸಬೇಕು. ಅಂಗವಿಕಲರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ +5 ಬೋನಸ್ ಅಂಕಗಳನ್ನು ನೀಡಲಾಗುವುದು, ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ, ಆ ಸ್ಥಳವನ್ನೇ ಅವರ ವಾಸ ಸ್ಥಳವೆಂದು ಪರಿಗಣಿಸಲಾಗುವುದು, ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣ ಪತ್ರದ ಬಗ್ಗೆ ಸಂಶಯ ಉಂಟಾದಲ್ಲಿ, ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದಾಗಿ ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯಲ್ಲಿಯೇ ಪರಿಶೀಲಿಸಿ ನಿರ್ಧರಿಸಲಾಗುವುದು.

9. ಬೋನಸ್ ಅಂಕಗಳು: (ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ)

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಬೇಕು. ವಯಸ್ಸು ಸಮಾನವಾಗಿದ್ದಲ್ಲಿ ವಿಧವೆ/ವಿಚ್ಛೇಧಿತೆಯರನ್ನು ಪರಿಗಣಿಸಬೇಕು. ಮಾಜಿ ದೇವದಾಸಿಯ ಮಗಳು, ಯೋಜನಾ ನಿರಾಶ್ರಿತರು, ವಿಚ್ಛೇದಿತ ಮಹಿಳೆಯರು ಇವರುಗಳಿಗೆ 5 ಬೋನಸ್ ಅಂಕಗಳನ್ನು ನಿಗದಿಪಡಿಸುವುದು. (ಅಧಿಕೃತ ಪ್ರಮಾಣಪತ್ರ ನೀಡುವ ಷರತ್ತಿಗೊಳಪಟ್ಟು)

10. ಆನ್‌ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:-

1. ಅರ್ಜಿ ನಿಗದಿತ ನಮೂನೆಯಲ್ಲಿ (ಆನ್‌ಲೈನ್)
2. ಜನನ ಪ್ರಮಾಣ ಪತ್ರ/ಜನ್ಮ ದಿನಾಂಕ ಇರುವ ಎಸ್.ಎಸ್.ಎಲ್.ಸಿ ಅಂಕಪಟ್ಟಿ,
3. ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ,
4. ತಹಶೀಲ್ದಾದಾರರು/ಉಪ ತಹಶೀಲ್ದಾದಾರರಿಂದ ಪಡೆದ ಮೂರು (3) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.
5. ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ ತಹಶೀಲ್ದಾರರಿಂದ ಪಡೆದಿರಬೇಕು.
6. ಪತಿಯ ಮರಣ ಪ್ರಮಾಣ ಪತ್ರ ಹಾಗೂ ವಿಧವಾ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ).
7. ವಿಕಲಚೇತನರ ಪ್ರಮಾಣಪತ್ರ UDID (Unique Disability ID)
8. ವಿಚ್ಛೇದನ ಪ್ರಮಾಣ ಪತ್ರ (ನ್ಯಾಯಾಲಯದಿಂದ ಪಡೆದಿರಬೇಕು)

For more job news visit : www.kpscvaani.com

9. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
10. ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳ ನಿವಾಸಿಗಳು ಕನಿಷ್ಠ 03 ವರ್ಷ ಸಂಸ್ಥೆಯಲ್ಲಿರಬೇಕು. ಹಾಗೂ ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ನಿವಾಸಿ ಪ್ರಮಾಣ ಪತ್ರ.
11. ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.
12. ಆಧಾರ ಕಾರ್ಡ/ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ ಅರ್ಜಿಯೊಂದಿಗೆ ಸಲ್ಲಿಸುವುದು.
13. ಎಲ್ಲಾ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಣ ಮಾಡಿಸಿ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸ ಬೇಕಾದ ವಿಳಾಸ :

ಕ್ರ.ಸಂ	ಶಿಶು ಅಭಿವೃದ್ಧಿ ಯೋಜನೆ	ವಿಳಾಸ	ದೂರವಾಣಿ ಸಂಖ್ಯೆ
01.	ಶಹಾಪೂರ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಗಂಜ್ ಏರಿಯಾ, ಶಹಾಪೂರ	08479-243254/ 9019757399
02.	ಸುರಪುರ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಹಳೆ ಕೋರ್ಟ ಕಟ್ಟಡ, ಜೈಲ್ ಹತ್ತಿರ, ಸುರಪುರ	08443-256808/ 9972219600
03.	ಯಾದಗಿರಿ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ ಸ್ತ್ರೀ ಶಕ್ತಿ ಭವನ, ಜಿಲ್ಲಾ ಆಸ್ಪತ್ರೆ ರಸ್ತೆ, ಯಾದಗಿರಿ	08473-252265/ 9902878603
04.	ಗುರುಮಠಕಲ್	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ, ಗುಮಡಲಾ ಕಾಂಪ್ಲೇಸ್, ಬಸ್ ನಿಲ್ದಾಣದ ಮುಂದುಗಡೆ, ಗುರುಮಠಕಲ್	08473-225035/ 9902878603

ಉಪನಿರ್ದೇಶಕರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ

ಪ್ರತಿಯನ್ನು :

1. ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರುರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿರವರ ದಯಾಪರ ಮಾಹಿತಿಗಾಗಿ.
3. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿರವರ ದಯಾಪರ ಮಾಹಿತಿಗಾಗಿ.
4. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಯಾದಗಿರಿ
5. ಯೋಜನಾ ನಿರ್ದೇಶಕರು, ನಗರಭಿವೃದ್ಧಿ ಕೋಶ, ಯಾದಗಿರಿ
6. ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಯಾದಗಿರಿ
7. ಯಾದಗಿರಿ ಜಿಲ್ಲೆಯ ಎಲ್ಲಾ ತಹಸೀಲ್ದಾರರ ಮಾಹಿತಿಗಾಗಿ (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)

For more job news visit : www.kpscvaani.com

ಅನುಬಂಧ-01

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳ ವಿವರ

ಕ್ರ.ಸಂ	ಯೋಜನೆಯ ಹೆಸರು	ನಗರ/ ಗ್ರಾಮೀಣ	ನಗರ/ಗ್ರಾಮ ಪಂಚಾಯತ	ಅಂಗನವಾಡಿ ಕೇಂದ್ರದ ಹೆಸರು	ಇತ್ತೀಚಿನ ನೇಮಕಾತಿ ಸರ್ಕಾರಿ ಆದೇಶ ಅನ್ವಯ ನಿಗದಿ ಪಡಿಸಿದ ಮೀಸಲಾತಿ
1	2	3	4	5	6
1	ಶಹಾಪುರ	ಗ್ರಾಮೀಣ	ಕಕ್ಕಸಗೇರಾ	ಬೋವಿ ಕಾಡಂಗೇರಾ -1	ಇತರೆ
2	ಶಹಾಪುರ	ಗ್ರಾಮೀಣ	ಗುಲಸರಂ	ಹುಲಕಲ್ ಜಿ-01	ಪರಿಶಿಷ್ಟ ಪಂಗಡ
3	ಶಹಾಪುರ	ಗ್ರಾಮೀಣ	ಗೋಗಿ ಕೆ	ಗೋಗಿ ಕೆ-4	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
4	ಶಹಾಪುರ	ಗ್ರಾಮೀಣ	ಚಟ್ನಳ್ಳಿ	ಚಟ್ನಳ್ಳಿ-4	ಪರಿಶಿಷ್ಟ ಪಂಗಡ
5	ಶಹಾಪುರ	ಗ್ರಾಮೀಣ	ಚಾಮನಾಳ	ಸಿಂಗನಾಯಕ ತಾಂಡಾ	ಪರಿಶಿಷ್ಟ ಜಾತಿ
6	ಶಹಾಪುರ	ಗ್ರಾಮೀಣ	ತಡಿಬಿಡಿ	ಹುಂಡೆಕಲ್-1	ಇತರೆ
7	ಶಹಾಪುರ	ಗ್ರಾಮೀಣ	ದೋರನಹಳ್ಳಿ	ಬೇವಿನಳ್ಳಿ ತಾಂಡಾ	ಪರಿಶಿಷ್ಟ ಜಾತಿ
8	ಶಹಾಪುರ	ಗ್ರಾಮೀಣ	ಬಿಳ್ಹಾರ	ಬಿಳ್ಹಾರ-3	ಇತರೆ
9	ಶಹಾಪುರ	ಗ್ರಾಮೀಣ	ಬೀರನೂರ	ನಂದಿಹಳ್ಳಿ ಜಿ	ಇತರೆ
10	ಶಹಾಪುರ	ಗ್ರಾಮೀಣ	ವಡಗೇರಾ	ವಡಗೇರಾ-4	ಪರಿಶಿಷ್ಟ ಜಾತಿ
11	ಶಹಾಪುರ	ಗ್ರಾಮೀಣ	ಹತ್ತಿಗೂಡುರ	ಕೊಂಗಂಡಿ-1	ಇತರೆ
12	ಶಹಾಪುರ	ಗ್ರಾಮೀಣ	ಹೋತಪೇಠ	ಇಂಗಳಗಿ	ಇತರೆ
13	ಸುರಪುರ	ಗ್ರಾಮೀಣ	ಅಗ್ನಿ	ಅಗತೀರ್ಥ-01	ಇತರೆ
14	ಸುರಪುರ	ಗ್ರಾಮೀಣ	ಅಗ್ನಿ	ಅಮಲಿಹಾಳ-02	ಪರಿಶಿಷ್ಟ ಜಾತಿ
15	ಸುರಪುರ	ಗ್ರಾಮೀಣ	ಕಚಕನೂರ	ಕಚಕನೂರ-01	ಪರಿಶಿಷ್ಟ ಪಂಗಡ
16	ಸುರಪುರ	ಗ್ರಾಮೀಣ	ಕಾಮನಟಗಿ	ಸೊನ್ನಾಪುರ	ಇತರೆ
17	ಸುರಪುರ	ನಗರ	ಕೆಂಭಾವಿ	ಕಾಳಮ್ಮಗುಡಿ	ಪರಿಶಿಷ್ಟ ಜಾತಿ
18	ಸುರಪುರ	ನಗರ	ಕೆಂಭಾವಿ	ಕೆಂಭಾವಿ-05	ಪರಿಶಿಷ್ಟ ಜಾತಿ
19	ಸುರಪುರ	ಗ್ರಾಮೀಣ	ಜೋಗುಂಡಭಾವಿ	ಲಕ್ಷ್ಮಣಕೇರಿ	ಇತರೆ
20	ಸುರಪುರ	ಗ್ರಾಮೀಣ	ಜೋಗುಂಡಬಾವಿ	ಜೋಗುಂಡಬಾವಿ-01	ಇತರೆ
21	ಸುರಪುರ	ಗ್ರಾಮೀಣ	ತಿಂಥಣಿ	ಹುಣಸಿಹೊಳೆ-1	ಪರಿಶಿಷ್ಟ ಪಂಗಡ
22	ಸುರಪುರ	ಗ್ರಾಮೀಣ	ತಿಂಥಣಿ	ಬಂಡೊಳ್ಳಿ	ಪರಿಶಿಷ್ಟ ಪಂಗಡ
23	ಸುರಪುರ	ಗ್ರಾಮೀಣ	ದೇವತ್ಕಲ್	ರಾಯಗೇರಾ	ಪರಿಶಿಷ್ಟ ಪಂಗಡ
24	ಸುರಪುರ	ಗ್ರಾಮೀಣ	ಬಾದ್ಯಾಪುರ	ಪಾರುದೊಡ್ಡಿ	ಇತರೆ
25	ಸುರಪುರ	ಗ್ರಾಮೀಣ	ಬೈಚಬಾಳ	ಕನ್ನಳ್ಳಿ-01	ಇತರೆ
26	ಸುರಪುರ	ಗ್ರಾಮೀಣ	ಬೈಲಕುಂಟಿ	ಜುಮಾಲಪುರ-01	ಪರಿಶಿಷ್ಟ ಜಾತಿ
27	ಸುರಪುರ	ಗ್ರಾಮೀಣ	ಬೈಲಕುಂಟಿ	ಬೊಮ್ಮಗುಡ್ಡ ತಾಂಡಾ	ಪರಿಶಿಷ್ಟ ಪಂಗಡ
28	ಸುರಪುರ	ಗ್ರಾಮೀಣ	ಬೈಲಕುಂಟಿ	ಹಣಮಸಾಗರ-01	ಇತರೆ
29	ಸುರಪುರ	ಗ್ರಾಮೀಣ	ಮುದನೂರ ಕೆ	ಮುದನೂರ ಕೆ.-01	ಇತರೆ
30	ಸುರಪುರ	ಗ್ರಾಮೀಣ	ಯಕ್ತಾಪುರ	ಬಿ.ತಳ್ಳಳ್ಳಿ-01	ಇತರೆ
31	ಸುರಪುರ	ಗ್ರಾಮೀಣ	ಯಕ್ತಾಪುರ	ಎಮ್.ಬೊಮ್ಮನಹಳ್ಳಿ-02	ಇತರೆ
32	ಸುರಪುರ	ಗ್ರಾಮೀಣ	ಯಾಳಗಿ	ಯಾಳಗಿ-01	ಪರಿಶಿಷ್ಟ ಪಂಗಡ
33	ಸುರಪುರ	ಗ್ರಾಮೀಣ	ಸೂಗೂರ	ಚೌಡೇಶ್ವರಿಹಾಳ-01	ಇತರೆ
34	ಸುರಪುರ	ಗ್ರಾಮೀಣ	ಹಗರಟಗಿ	ಹೊರಟ್ಟಿ-01	ಪರಿಶಿಷ್ಟ ಜಾತಿ
35	ಸುರಪುರ	ಗ್ರಾಮೀಣ	ಹೇಮನೂರ	ಹೇಮನೂರ-02	ಪರಿಶಿಷ್ಟ ಪಂಗಡ
36	ಸುರಪುರ	ಗ್ರಾಮೀಣ	ಹೇಮನೂರ	ಶಾಖಾಪುರ.ಎಸ್.ಎಚ್	ಇತರೆ
37	ಯಾದಗಿರಿ	ಗ್ರಾಮೀಣ	ಅಜಲಾಪುರ	ತುರಕನದೊಡ್ಡಿ	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
38	ಯಾದಗಿರಿ	ಗ್ರಾಮೀಣ	ಕಡೇಚೂರು	ಕಡೇಚೂರು-5	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
39	ಯಾದಗಿರಿ	ಗ್ರಾಮೀಣ	ಕಡೇಚೂರು	ಚಂದಾಪೂರ-2	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
40	ಯಾದಗಿರಿ	ಗ್ರಾಮೀಣ	ಕಡೇಚೂರು	ಚಂದಾಪೂರ1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)

For more job news visit : www.kpscvaani.com

ಕ್ರ.ಸಂ	ಯೋಜನೆಯ ಹೆಸರು	ನಗರ/ ಗ್ರಾಮೀಣ	ನಗರ/ಗ್ರಾಮ ಪಂಚಾಯತ	ಅಂಗನವಾಡಿ ಕೇಂದ್ರದ ಹೆಸರು	ಇತ್ತೀಚ್ಚಿನ ನೇಮಕಾತಿ ಸರ್ಕಾರಿ ಆದೇಶ ಅನ್ವಯ ನಿಗದಿ ಪಡಿಸಿದ ಮೀಸಲಾತಿ
1	2	3	4	5	6
41	ಯಾದಗಿರಿ	ಗ್ರಾಮೀಣ	ಕೌಳೂರು	ಜಿನಕೇರಾ03	ಇತರೆ
42	ಯಾದಗಿರಿ	ಗ್ರಾಮೀಣ	ಕೌಳೂರು	ಲಿಂಗೇರಿ ಸ್ಟೇಶನ್	ಇತರೆ
43	ಯಾದಗಿರಿ	ಗ್ರಾಮೀಣ	ಮಲ್ಲಾರ	ಸಂಗ್ಲಾರ-2	ಇತರೆ
44	ಯಾದಗಿರಿ	ಗ್ರಾಮೀಣ	ಮಲ್ಲಾರ	ಸಾವೂರು-1	ಇತರೆ
45	ಯಾದಗಿರಿ	ಗ್ರಾಮೀಣ	ಮುದ್ನಾಳ	ಮುದ್ನಾಳ ದೊಡ್ಡ ತಾಂಡಾ-1	ಪರಿಶಿಷ್ಟ ಜಾತಿ
46	ಯಾದಗಿರಿ	ಗ್ರಾಮೀಣ	ಯಲಸತ್ತಿ	ತೊಟ್ನೂರು ತಾಂಡ	ಪರಿಶಿಷ್ಟ ಜಾತಿ
47	ಯಾದಗಿರಿ	ನಗರ	ಯಾದಗಿರಿ	ಗಂಗಾನಗರ	ಇತರೆ
48	ಯಾದಗಿರಿ	ನಗರ	ಯಾದಗಿರಿ	ಎಸ್ ಪಿ ಕಾಲೋನಿ	ಇತರೆ
49	ಯಾದಗಿರಿ	ನಗರ	ಯಾದಗಿರಿ	ಕೊಟಗೇರಾವಾಡ	ಪರಿಶಿಷ್ಟ ಜಾತಿ
50	ಯಾದಗಿರಿ	ಗ್ರಾಮೀಣ	ಸೈದಾಪುರ	ರಾಂಪೂರ ಕೆ	ಇತರೆ
51	ಯಾದಗಿರಿ	ಗ್ರಾಮೀಣ	ಸೈದಾಪುರ	ಗ್ರಾಮ ಸೈದಾಪೂರ-1	ಪರಿಶಿಷ್ಟ ಜಾತಿ
52	ಯಾದಗಿರಿ	ಗ್ರಾಮೀಣ	ಸೈದಾಪೂರ	ದದ್ಮಲ್	ಪರಿಶಿಷ್ಟ ಜಾತಿ
53	ಗುರುಮಠಕಲ್	ಗ್ರಾಮೀಣ	ಅನಪೂರ	ಯಡೇಪಲ್ಲಿ	ಇತರೆ
54	ಗುರುಮಠಕಲ್	ಗ್ರಾಮೀಣ	ಕೊಂಕಲ್	ಪಾಡಪಲ್ಲಿ	ಇತರೆ
55	ಗುರುಮಠಕಲ್	ಗ್ರಾಮೀಣ	ಜೈಗ್ರಾಮ	ಗೊರನೂರ-2	ಪರಿಶಿಷ್ಟ ಜಾತಿ
56	ಗುರುಮಠಕಲ್	ಗ್ರಾಮೀಣ	ಪುಟಪಾಕ	ಪುಟಪಾಕ-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
57	ಗುರುಮಠಕಲ್	ಗ್ರಾಮೀಣ	ಯಂಪಾಡ	ತಾತಳಗೇರಾ-1	ಇತರೆ
58	ಗುರುಮಠಕಲ್	ಗ್ರಾಮೀಣ	ಯರಗೋಳ	ಲಿಂಗಸನಳ್ಳಿತಾಂಡಾ	ಪರಿಶಿಷ್ಟ ಜಾತಿ
59	ಗುರುಮಠಕಲ್	ಗ್ರಾಮೀಣ	ಯರಗೋಳ	ಅಡಿಮುಡಿ ತಾಂಡಾ	ಪರಿಶಿಷ್ಟ ಜಾತಿ
60	ಗುರುಮಠಕಲ್	ಗ್ರಾಮೀಣ	ಹತ್ತಿಕುಣಿ	ಹತ್ತಿಕುಣಿ ಕ್ಯಾಂಪ್	ಇತರೆ
61	ಗುರುಮಠಕಲ್	ಗ್ರಾಮೀಣ	ಹತ್ತಿಕುಣಿ	ಹತ್ತಿಕುಣಿ ತಾಂಡಾ	ಪರಿಶಿಷ್ಟ ಜಾತಿ

ಉಪನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ

For more job news visit : www.kpscvaani.com

ಅನುಬಂಧ-02

ಅಂಗನವಾಡಿ ಸಹಾಯಕಿಯರ ಹುದ್ದೆಗಳ ವಿವರ

ಕ್ರ.ಸಂ	ಯೋಜನೆಯ ಹೆಸರು	ನಗರ/ ಗ್ರಾಮೀಣ	ನಗರ/ಗ್ರಾಮ ಪಂಚಾಯತ	ಅಂಗನವಾಡಿ ಕೇಂದ್ರದ ಹೆಸರು	ಇತ್ತೀಚ್ಚಿನ ನೇಮಕಾತಿ ಸರ್ಕಾರಿ ಆದೇಶ ಅನ್ವಯ ನಿಗದಿ ಪಡಿಸಿದ ಮೀಸಲಾತಿ
1	2	3	4	5	6
1	ಶಹಾಪುರ	ಗ್ರಾಮೀಣ	ಇಬ್ರಾಹಿಂಪೂರ	ಇಬ್ರಾಹಿಂಪೂರ ತಾಂಡಾ	ಪರಿಶಿಷ್ಟ ಜಾತಿ
2	ಶಹಾಪುರ	ಗ್ರಾಮೀಣ	ಉಕ್ಕಿನಾಳ	ರಬ್ಬನಳ್ಳಿ ತಾಂಡಾ	ಪರಿಶಿಷ್ಟ ಜಾತಿ
3	ಶಹಾಪುರ	ಗ್ರಾಮೀಣ	ಕಕ್ಕಸಗೇರ	ಕಕ್ಕಸಗೇರ-1	ಪರಿಶಿಷ್ಟ ಜಾತಿ
4	ಶಹಾಪುರ	ಗ್ರಾಮೀಣ	ಕಕ್ಕಸಗೇರಾ	ಬೋವಿ ಕಾಡಂಗೇರಾ -1	ಇತರೆ
5	ಶಹಾಪುರ	ಗ್ರಾಮೀಣ	ಕಕ್ಕಸಗೇರಾ	ಕಕ್ಕಸಗೇರಾ-2	ಪರಿಶಿಷ್ಟ ಪಂಗಡ
6	ಶಹಾಪುರ	ಗ್ರಾಮೀಣ	ಕಕ್ಕಸಗೇರಾ	ಕಕ್ಕಸಗೇರಾ ತಾಂಡಾ	ಪರಿಶಿಷ್ಟ ಜಾತಿ
7	ಶಹಾಪುರ	ಗ್ರಾಮೀಣ	ಕನ್ಯಾಕೋಳ್ಳೂರ	ಕನ್ಯಾಕೋಳ್ಳೂರ ತಾಂಡಾ	ಪರಿಶಿಷ್ಟ ಜಾತಿ
8	ಶಹಾಪುರ	ಗ್ರಾಮೀಣ	ಕಾಡಂಗೇರಾ ಬಿ	ಕಾ ತನಾಳ-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
9	ಶಹಾಪುರ	ಗ್ರಾಮೀಣ	ಕಾಡಂಗೇರಾ ಬಿ	ಶಂಕರಬಂಡಿ	ಇತರೆ
10	ಶಹಾಪುರ	ಗ್ರಾಮೀಣ	ಕುರಕುಂದ	ಕುರಕುಂದ-6	ಪರಿಶಿಷ್ಟ ಜಾತಿ
11	ಶಹಾಪುರ	ಗ್ರಾಮೀಣ	ಕುರಕುಂದ	ಮಲಹಳ್ಳಿ-2	ಇತರೆ
12	ಶಹಾಪುರ	ಗ್ರಾಮೀಣ	ಕೊಳ್ಳೂರ ಎಂ	ಕೊಳ್ಳೂರ ಎಂ-2	ಪರಿಶಿಷ್ಟ ಪಂಗಡ
13	ಶಹಾಪುರ	ಗ್ರಾಮೀಣ	ಗೋಗಿ	ರೇವುನಾಯ್ಕ ತಾಂಡಾ	ಪರಿಶಿಷ್ಟ ಜಾತಿ
14	ಶಹಾಪುರ	ಗ್ರಾಮೀಣ	ಗೋನಾಳ	ಗುಂಡೂರು	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
15	ಶಹಾಪುರ	ಗ್ರಾಮೀಣ	ಚಟ್ನಳ್ಳಿ	ಚಟ್ನಳ್ಳಿ-4	ಪರಿಶಿಷ್ಟ ಪಂಗಡ
16	ಶಹಾಪುರ	ಗ್ರಾಮೀಣ	ಚಟ್ನಳ್ಳಿ	ಚಟ್ನಳ್ಳಿ ತಾಂಡಾ	ಪರಿಶಿಷ್ಟ ಜಾತಿ
17	ಶಹಾಪುರ	ಗ್ರಾಮೀಣ	ಚಟ್ನಳ್ಳಿ	ಚಟ್ನಳ್ಳಿ-2	ಪರಿಶಿಷ್ಟ ಜಾತಿ
18	ಶಹಾಪುರ	ಗ್ರಾಮೀಣ	ಚಟ್ನಳ್ಳಿ	ಕರಣಗಿ	ಇತರೆ
19	ಶಹಾಪುರ	ಗ್ರಾಮೀಣ	ಚಾಮನಾಳ	ಚಂದಾಪೂರ ಕೇಳಗಿನ ತಾಂಡಾ	ಪರಿಶಿಷ್ಟ ಜಾತಿ
20	ಶಹಾಪುರ	ಗ್ರಾಮೀಣ	ಚಾಮನಾಳ	ಚಾಮನಾಳ-1	ಪರಿಶಿಷ್ಟ ಜಾತಿ
21	ಶಹಾಪುರ	ಗ್ರಾಮೀಣ	ಟಿ ವಡಗೇರಾ	ಅನವಾರ-2	ಇತರೆ
22	ಶಹಾಪುರ	ಗ್ರಾಮೀಣ	ಟಿ ವಡಗೇರಾ	ಟಿ ವಡಗೇರಾ-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
23	ಶಹಾಪುರ	ಗ್ರಾಮೀಣ	ನಾಗನಟಗಿ	ಡೋಗ್ರಿ ತಾಂಡಾ	ಪರಿಶಿಷ್ಟ ಜಾತಿ
24	ಶಹಾಪುರ	ಗ್ರಾಮೀಣ	ನಾಗನಟಗಿ	ಗಂಗನಾಳ-2	ಪರಿಶಿಷ್ಟ ಜಾತಿ
25	ಶಹಾಪುರ	ಗ್ರಾಮೀಣ	ನಾಯ್ಕಲ್	ನಾಯ್ಕಲ್-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
26	ಶಹಾಪುರ	ಗ್ರಾಮೀಣ	ಬಿಳ್ಹಾರ	ಕಂದಳ್ಳಿ-2	ಪರಿಶಿಷ್ಟ ಜಾತಿ
27	ಶಹಾಪುರ	ಗ್ರಾಮೀಣ	ಬಿಳ್ಹಾರ	ಬೂದಿನಾಳ	ಇತರೆ
28	ಶಹಾಪುರ	ಗ್ರಾಮೀಣ	ಬಿಳ್ಹಾರ	ಬಿಳ್ಹಾರ-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
29	ಶಹಾಪುರ	ಗ್ರಾಮೀಣ	ಬೀರನೂರ	ನಂದಿಹಳ್ಳಿ ಜಿ	ಇತರೆ
30	ಶಹಾಪುರ	ಗ್ರಾಮೀಣ	ಬೀರನೂರ	ಸಾವೂರ	ಪರಿಶಿಷ್ಟ ಜಾತಿ
31	ಶಹಾಪುರ	ಗ್ರಾಮೀಣ	ಬೀರನೂರ	ಬೀರನೂರ-1	ಪರಿಶಿಷ್ಟ ಜಾತಿ
32	ಶಹಾಪುರ	ಗ್ರಾಮೀಣ	ಬೆಂಡಬೆಂಬಳ್ಳಿ	ಬೆಂಡಬೆಂಬಳ್ಳಿ-3	ಇತರೆ
33	ಶಹಾಪುರ	ಗ್ರಾಮೀಣ	ಬೆಂಡಬೆಂಬಳ್ಳಿ	ಬೆಂಡಬೆಂಬಳ್ಳಿ-2	ಪರಿಶಿಷ್ಟ ಜಾತಿ
34	ಶಹಾಪುರ	ಗ್ರಾಮೀಣ	ಬೆಂಡಬೆಂಬಳ್ಳಿ	ಕದರಾಪೂರ	ಪರಿಶಿಷ್ಟ ಜಾತಿ
35	ಶಹಾಪುರ	ಗ್ರಾಮೀಣ	ಮದ್ರಕಿ	ಮದ್ರಕಿ-4	ಪರಿಶಿಷ್ಟ ಜಾತಿ
36	ಶಹಾಪುರ	ಗ್ರಾಮೀಣ	ರಸ್ತಾಪೂರ	ರಸ್ತಾಪೂರ-4	ಇತರೆ

For more job news visit : www.kpscvaani.com

ಕ್ರ.ಸಂ	ಯೋಜನೆಯ ಹೆಸರು	ನಗರ/ ಗ್ರಾಮೀಣ	ನಗರ/ಗ್ರಾಮ ಪಂಚಾಯತ	ಅಂಗನವಾಡಿ ಕೇಂದ್ರದ ಹೆಸರು	ಇತ್ತೀಚಿನ ನೇಮಕಾತಿ ಸರ್ಕಾರಿ ಆದೇಶ ಅನ್ವಯ ನಿಗದಿ ಪಡಿಸಿದ ಮೀಸಲಾತಿ
1	2	3	4	5	6
37	ಶಹಾಪುರ	ಗ್ರಾಮೀಣ	ರಸ್ತಾಪೂರ	ವಿಭೂತಿಹಳ್ಳಿ-1	ಇತರೆ
38	ಶಹಾಪುರ	ಗ್ರಾಮೀಣ	ವಡಗೇರಾ	ವಡಗೇರಾ-2	ಪರಿಶಿಷ್ಟ ಪಂಗಡ
39	ಶಹಾಪುರ	ನಗರ	ಶಹಾಪುರ	ಗುತ್ತಿಪೇಠ-2 (ಶಹಾಪೂರ ನಗರ)	ಇತರೆ
40	ಶಹಾಪುರ	ನಗರ	ಶಹಾಪುರ	ಆಶ್ರಯ ಕಾಲೋನಿ (ಶಹಾಪೂರ ನಗರ)	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
41	ಶಹಾಪುರ	ನಗರ	ಶಹಾಪುರ (ಭೀಮರಾಯನ ಗುಡಿ)	ಶಖಾಪೂರ ತಾಂಡಾ	ಪರಿಶಿಷ್ಟ ಜಾತಿ
42	ಶಹಾಪುರ	ನಗರ	ಶಹಾಪುರ	ಕುಂಬಾರ ಓಣಿ-2	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
43	ಶಹಾಪುರ	ನಗರ	ಶಹಾಪುರ	ಗುತ್ತಿಪೇಠ-1 (ಶಹಾಪೂರ ನಗರ)	ಪರಿಶಿಷ್ಟ ಜಾತಿ
44	ಶಹಾಪುರ	ನಗರ	ಶಹಾಪುರ	ಕೊಲ್ಕರ ಓಣ	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
45	ಶಹಾಪುರ	ನಗರ	ಶಹಾಪುರ	ಹಳಿಪೇಠ-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
46	ಶಹಾಪುರ	ನಗರ	ಶಹಾಪುರ	ಹಳಿಸಗರ-1	ಪರಿಶಿಷ್ಟ ಜಾತಿ
47	ಶಹಾಪುರ	ನಗರ/	ಶಹಾಪುರ	ಚಾಮುಂಡೇಶ್ವರ ನಗರ	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
48	ಶಹಾಪುರ	ಗ್ರಾಮೀಣ	ಸಗರ	ಸಗರ-3	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
49	ಶಹಾಪುರ	ಗ್ರಾಮೀಣ	ಸಗರ	ರೇಣುಕಾ ನಗರ	ಇತರೆ
50	ಶಹಾಪುರ	ಗ್ರಾಮೀಣ	ಸಗರ	ಯಕ್ಕಿಗಡ್ಡಿ	ಇತರೆ
51	ಶಹಾಪುರ	ಗ್ರಾಮೀಣ	ಸಗರ	ಸಗರ-7	ಪರಿಶಿಷ್ಟ ಪಂಗಡ
52	ಶಹಾಪುರ	ಗ್ರಾಮೀಣ	ಹೈಯಾಳ ಬಿ	ಹೈಯಾಳ ಬಿ-1	ಇತರೆ
53	ಶಹಾಪುರ	ಗ್ರಾಮೀಣ	ಹೈಯಾಳ ಬಿ	ಮದರಕಲ್	ಇತರೆ
54	ಶಹಾಪುರ	ಗ್ರಾಮೀಣ	ಹೊತಪೇಠ	ದಿಗ್ಗಿ-2	ಪರಿಶಿಷ್ಟ ಜಾತಿ
55	ಶಹಾಪುರ	ಗ್ರಾಮೀಣ	ಹೊತಪೇಠ	ಹೋತಪೇಠ ರೋಡಿನ ತಾಂಡಾ	ಪರಿಶಿಷ್ಟ ಜಾತಿ
56	ಶಹಾಪುರ	ಗ್ರಾಮೀಣ	ಹೊತಪೇಠ	ಹೋತಪೇಠ-1	ಪರಿಶಿಷ್ಟ ಜಾತಿ
57	ಶಹಾಪುರ	ಗ್ರಾಮೀಣ	ಹೊಸಕೇರಾ	ಹೊಸಕೇರಾ ಬಂಡರ ದೊಡ್ಡಿ	ಪರಿಶಿಷ್ಟ ಪಂಗಡ
58	ಶಹಾಪುರ	ಗ್ರಾಮೀಣ	ಹೋತಪೇಠ	ಇಂಗಳಗಿ	ಇತರೆ
59	ಸುರಪುರ	ಗ್ರಾಮೀಣ	ಆಲ್ಹಾಳ	ಆಲ್ಹಾಳ-02	ಇತರೆ
60	ಸುರಪುರ	ಗ್ರಾಮೀಣ	ಏವೂರ	ಏವೂರ-03	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
61	ಸುರಪುರ	ನಗರ	ಕಕ್ಕೇರಾ	ಅಸ್ಕೇರದೊಡ್ಡಿ	ಇತರೆ
62	ಸುರಪುರ	ನಗರ	ಕಕ್ಕೇರಾ	ಪೀರನಾಯ್ಕ ತಾಂಡಾ	ಪರಿಶಿಷ್ಟ ಜಾತಿ
63	ಸುರಪುರ	ನಗರ	ಕಕ್ಕೇರಾ	ಹೊಸುರು	ಪರಿಶಿಷ್ಟ ಪಂಗಡ
64	ಸುರಪುರ	ನಗರ	ಕಕ್ಕೇರಾ	ಕಕ್ಕೇರಾ-04	ಪರಿಶಿಷ್ಟ ಪಂಗಡ
65	ಸುರಪುರ	ಗ್ರಾಮೀಣ	ಕಚಕನೂರ	ಬೆನಕನಹಳ್ಳಿ-01	ಪರಿಶಿಷ್ಟ ಜಾತಿ
66	ಸುರಪುರ	ಗ್ರಾಮೀಣ	ಕಿರದಳ್ಳಿ	ಕಿರದಳ್ಳಿ-01	ಇತರೆ
67	ಸುರಪುರ	ನಗರ	ಕೆಂಭಾವಿ	ಪರಸನಹಳ್ಳಿ-02	ಇತರೆ
68	ಸುರಪುರ	ನಗರ	ಕೆಂಭಾವಿ	ಕೆಂಭಾವಿ-7	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
69	ಸುರಪುರ	ಗ್ರಾಮೀಣ	ಖಾನಾಪುರ ಎಸ್.ಎಚ್	ರುಕ್ಮಾಪುರ-05	ಪರಿಶಿಷ್ಟ ಜಾತಿ
70	ಸುರಪುರ	ಗ್ರಾಮೀಣ	ಗೆದ್ದಲಮರಿ	ಏದಲಬಾವಿ ತಾಂಡಾ	ಪರಿಶಿಷ್ಟ ಜಾತಿ
71	ಸುರಪುರ	ಗ್ರಾಮೀಣ	ಗೆದ್ದಲಮರಿ	ಮಾತೃನಾಯಕದೊಡ್ಡಿ	ಪರಿಶಿಷ್ಟ ಜಾತಿ
72	ಸುರಪುರ	ಗ್ರಾಮೀಣ	ಗೆದ್ದಲಮರಿ	ಜುಮಾಲಪುರ ದೊಂಡಾ-04 (ಡಂಗಾರದೊಡ್ಡಿ)	ಪರಿಶಿಷ್ಟ ಜಾತಿ
73	ಸುರಪುರ	ಗ್ರಾಮೀಣ	ಗೆದ್ದಲಮರಿ	ಏದಲಭಾವಿ	ಪರಿಶಿಷ್ಟ ಪಂಗಡ
74	ಸುರಪುರ	ಗ್ರಾಮೀಣ	ಜೋಗುಂಡಭಾವಿ	ಜೋಗುಂಡಭಾವಿ-03	ಇತರೆ

For more job news visit : www.kpscvaani.com

ಕ್ರ.ಸಂ	ಯೋಜನೆಯ ಹೆಸರು	ನಗರ/ ಗ್ರಾಮೀಣ	ನಗರ/ಗ್ರಾಮ ಪಂಚಾಯತ	ಅಂಗನವಾಡಿ ಕೇಂದ್ರದ ಹೆಸರು	ಇತ್ತೀಚಿನ ನೇಮಕಾತಿ ಸರ್ಕಾರಿ ಆದೇಶ ಅನ್ವಯ ನಿಗದಿ ಪಡಿಸಿದ ಮೀಸಲಾತಿ
1	2	3	4	5	6
75	ಸುರಪುರ	ಗ್ರಾಮೀಣ	ಜೋಗುಂಡಭಾವಿ	ಲಕ್ಷ್ಮಣಕೇರಿ	ಪರಿಶಿಷ್ಟ ಜಾತಿ
76	ಸುರಪುರ	ಗ್ರಾಮೀಣ	ತಿಂಥಣಿ	ಶಾಂತಪುರ-01	ಇತರೆ
77	ಸುರಪುರ	ಗ್ರಾಮೀಣ	ತಿಂಥಣಿ	ತಿಂಥಣಿ-01	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
78	ಸುರಪುರ	ಗ್ರಾಮೀಣ	ದೇವತ್ಕಲ	ಕೊನ್ನಾಳ-01	ಇತರೆ
79	ಸುರಪುರ	ಗ್ರಾಮೀಣ	ದೇವತ್ಕಲ	ಗೋದಿಹಾಳ-ಟಿ	ಇತರೆ
80	ಸುರಪುರ	ಗ್ರಾಮೀಣ	ನಾರಾಯಣಪುರ	ಬಂಡೆಗುಡ್ಡ-02	ಇತರೆ
81	ಸುರಪುರ	ಗ್ರಾಮೀಣ	ನಾರಾಯಣಪುರ	ನಾರಾಯಣಪುರ-05 (ಮೌನೇಶ್ವರ ಕ್ಯಾಂಪ್)	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
82	ಸುರಪುರ	ಗ್ರಾಮೀಣ	ಪೇಠ ಅಮ್ಮಾಪುರ	ಚಿಗರಿಹಾಳ-02	ಇತರೆ
83	ಸುರಪುರ	ಗ್ರಾಮೀಣ	ಪೇಠ ಅಮ್ಮಾಪುರ	ಜಾಲಿಬೆಂಚಿ-02	ಇತರೆ
84	ಸುರಪುರ	ಗ್ರಾಮೀಣ	ಪೇಠ ಅಮ್ಮಾಪುರ	ಪೇಠ ಅಮ್ಮಾಪುರ-2	ಇತರೆ
85	ಸುರಪುರ	ಗ್ರಾಮೀಣ	ಬಾದ್ಯಾಪುರ	ಪಾರುದೊಡ್ಡಿ	ಪರಿಶಿಷ್ಟ ಪಂಗಡ
86	ಸುರಪುರ	ಗ್ರಾಮೀಣ	ಬೈಚಬಾಳ	ಕನ್ನಳ್ಳಿ-03	ಇತರೆ
87	ಸುರಪುರ	ಗ್ರಾಮೀಣ	ಬೈಲಕುಂಟಿ	ಹಣಮಸಾಗರ-03 (ಚಂದ್ರಮ್ಮನ ಗುಡಿ)	ಪರಿಶಿಷ್ಟ ಜಾತಿ
88	ಸುರಪುರ	ಗ್ರಾಮೀಣ	ಬೈಲಕುಂಟಿ	ಬೊಮ್ಮಗುಡ್ಡ ತಾಂಡಾ	ಪರಿಶಿಷ್ಟ ಜಾತಿ
89	ಸುರಪುರ	ಗ್ರಾಮೀಣ	ಬೈಲಕುಂಟಿ	ಹಣಮಸಾಗರ-02(ಹುಲಗಮ್ಮ ಗುಡಿ)	ಪರಿಶಿಷ್ಟ ಪಂಗಡ
90	ಸುರಪುರ	ಗ್ರಾಮೀಣ	ಬೈಲಕುಂಟಿ	ಕುಂಬಾರಬೆಂಚಿ	ಪರಿಶಿಷ್ಟ ಪಂಗಡ
91	ಸುರಪುರ	ಗ್ರಾಮೀಣ	ಬೈಲಕುಂಟಿ	ಬೈಲಕುಂಟಿ-02	ಪರಿಶಿಷ್ಟ ಪಂಗಡ
92	ಸುರಪುರ	ಗ್ರಾಮೀಣ	ಬೈಲಕುಂಟಿ	ಕಡದ್ಯಾಳ-02	ಪರಿಶಿಷ್ಟ ಪಂಗಡ
93	ಸುರಪುರ	ಗ್ರಾಮೀಣ	ಮಾರನಾಳ	ದಿಬ್ಬಿಕ್ಯಾಂಪ್	ಪರಿಶಿಷ್ಟ ಜಾತಿ
94	ಸುರಪುರ	ಗ್ರಾಮೀಣ	ಮಾಳನೂರ	ಕುಪ್ಪಿತಾಂಡಾ	ಪರಿಶಿಷ್ಟ ಜಾತಿ
95	ಸುರಪುರ	ಗ್ರಾಮೀಣ	ಮುದ್ನೂರ.ಬಿ	ಮುದ್ನೂರ.ಬಿ-02	ಇತರೆ
96	ಸುರಪುರ	ಗ್ರಾಮೀಣ	ಯಕ್ತಾಪುರ	ಚಿಂಚೋಳ್ಳಿ-01	ಇತರೆ
97	ಸುರಪುರ	ಗ್ರಾಮೀಣ	ಯಕ್ತಾಪುರ	ವಂದಗನೂರ-02	ಇತರೆ
98	ಸುರಪುರ	ಗ್ರಾಮೀಣ	ಯಕ್ತಾಪುರ	ಆಲ್ಹಾಳ-01	ಇತರೆ
99	ಸುರಪುರ	ಗ್ರಾಮೀಣ	ಯಕ್ತಾಪುರ	ಬಿ.ತಳ್ಳಳ್ಳಿ-01	ಇತರೆ
100	ಸುರಪುರ	ಗ್ರಾಮೀಣ	ಯಕ್ತಾಪುರ	ಮಲ್ಹಾಪುರ-01	ಇತರೆ
101	ಸುರಪುರ	ಗ್ರಾಮೀಣ	ವಾಗಣಗೇರಾ	ಮಲ್ಲಿಭಾವಿ	ಪರಿಶಿಷ್ಟ ಪಂಗಡ
102	ಸುರಪುರ	ಗ್ರಾಮೀಣ	ವಾಗಣಗೇರಾ	ವಾಗಣಗೇರಾ 01	ಪರಿಶಿಷ್ಟ ಪಂಗಡ
103	ಸುರಪುರ	ನಗರ	ಸುರಪುರ	ಸಂತ್ರಸವಾಡ	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
104	ಸುರಪುರ	ನಗರ	ಸುರಪುರ	ದೊಣ್ಣಿಗೇರಾ-01	ಪರಿಶಿಷ್ಟ ಪಂಗಡ
105	ಸುರಪುರ	ನಗರ	ಸುರಪುರ	ಪಿ.ಎಚ್.ಟಿಂಪಲ್-02	ಪರಿಶಿಷ್ಟ ಪಂಗಡ
106	ಸುರಪುರ	ಗ್ರಾಮೀಣ	ಸೂಗೂರ	ಚೌಡೇಶ್ವರಿಹಾಳ-01	ಪರಿಶಿಷ್ಟ ಪಂಗಡ
107	ಸುರಪುರ	ಗ್ರಾಮೀಣ	ಸೂಗೂರು	ಹೆಮ್ಮಡಗಿ	ಇತರೆ
108	ಸುರಪುರ	ಗ್ರಾಮೀಣ	ಹಗರಟಗಿ	ಹಗರಟಗಿ-01	ಇತರೆ
109	ಸುರಪುರ	ಗ್ರಾಮೀಣ	ಹಗರಟಗಿ	ಹಗರಟಗಿ-02	ಇತರೆ
110	ಸುರಪುರ	ಗ್ರಾಮೀಣ	ಹಗರಟಗಿ	ಹೊರಟ್ಟಿ-02	ಪರಿಶಿಷ್ಟ ಪಂಗಡ
111	ಸುರಪುರ	ನಗರ	ಹುಣಸಗಿ	ನಾಗಪ್ಪನಕಟ್ಟೆ ಯು.ಕೆ.ಪಿ.ಕ್ಯಾಂಪ್ ಹುಣಸಗಿ	ಇತರೆ
112	ಸುರಪುರ	ನಗರ	ಹುಣಸಗಿ	ಬಸವನಗರ	ಇತರೆ

For more job news visit : www.kpscvaani.com

ಕ್ರ.ಸಂ	ಯೋಜನೆಯ ಹೆಸರು	ನಗರ/ ಗ್ರಾಮೀಣ	ನಗರ/ಗ್ರಾಮ ಪಂಚಾಯತ	ಅಂಗನವಾಡಿ ಕೇಂದ್ರದ ಹೆಸರು	ಇತ್ತೀಚಿನ ನೇಮಕಾತಿ ಸರ್ಕಾರಿ ಆದೇಶ ಅನ್ವಯ ನಿಗದಿ ಪಡಿಸಿದ ಮೀಸಲಾತಿ
1	2	3	4	5	6
113	ಸುರಪುರ	ನಗರ	ಹುಣಸಗಿ	ಮಾಂತಸ್ವಾಮಿ ಮೃತ್ತ. ಹುಣಸಗಿ	ಇತರೆ
114	ಸುರಪುರ	ನಗರ	ಹುಣಸಗಿ	ಹುಣಸಗಿ ತಾಂಡಾ-02	ಪರಿಶಿಷ್ಟ ಜಾತಿ
115	ಸುರಪುರ	ಗ್ರಾಮೀಣ	ಹೆಬ್ಬಾಳ.ಬಿ	ಕಲ್ಲುದೇವನಹಳ್ಳಿ-01	ಇತರೆ
116	ಸುರಪುರ	ಗ್ರಾಮೀಣ	ಹೆಬ್ಬಾಳ.ಬಿ	ಬೈಲಾಪುರ ತಾಂಡಾ-02	ಪರಿಶಿಷ್ಟ ಜಾತಿ
117	ಯಾದಗಿರ	ಗ್ರಾಮೀಣ	ಅಜಲಾಪುರ	ತುರಕನದೊಡ್ಡಿ	ಇತರೆ
118	ಯಾದಗಿರ	ಗ್ರಾಮೀಣ	ಕಿಲ್ಲನಕೇರಾ	ಕಿಲ್ಲನಕೇರಾ-2	ಇತರೆ
119	ಯಾದಗಿರ	ಗ್ರಾಮೀಣ	ಕಿಲ್ಲನಕೇರಾ	ಗೌಡಗೇರಾ ತಾಂಡ	ಪರಿಶಿಷ್ಟ ಜಾತಿ
120	ಯಾದಗಿರ	ಗ್ರಾಮೀಣ	ಕಿಲ್ಲನಕೇರಾ	ಕೂಡೂರು-1	ಪರಿಶಿಷ್ಟ ಜಾತಿ
121	ಯಾದಗಿರಿ	ಗ್ರಾಮೀಣ	ಕೌಳೂರು	ಲಿಂಗೇರಿ ಸ್ಟೇಶನ್	ಇತರೆ
122	ಯಾದಗಿರ	ಗ್ರಾಮೀಣ	ಕೌಳೂರು	ಕೌಳೂರು-2	ಇತರೆ
123	ಯಾದಗಿರ	ಗ್ರಾಮೀಣ	ಕೌಳೂರು	ಶೆಟ್ಟಿಗೇರಾ-3	ಇತರೆ
124	ಯಾದಗಿರ	ಗ್ರಾಮೀಣ	ಕೌಳೂರು	ಜಿನಕೇರಾ-2	ಪರಿಶಿಷ್ಟ ಪಂಗಡ
125	ಯಾದಗಿರ	ಗ್ರಾಮೀಣ	ಠಾಣಗುಂದಿ	ಬೊಮ್ಮಶೆಟ್ಟಿಹಳ್ಳಿ	ಇತರೆ
126	ಯಾದಗಿರ	ಗ್ರಾಮೀಣ	ಠಾಣಗುಂದಿ	ಠಾಣಗುಂದಿ-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
127	ಯಾದಗಿರ	ಗ್ರಾಮೀಣ	ಬಳಿಚಕ್ರ	ಬಳಿಚಕ್ರ-1	ಇತರೆ
128	ಯಾದಗಿರ	ಗ್ರಾಮೀಣ	ಬಳಿಚಕ್ರ	ಬಳಿಚಕ್ರ-4	ಇತರೆ
129	ಯಾದಗಿರ	ಗ್ರಾಮೀಣ	ಬಳಿಚಕ್ರ	ನಗ್ನಾಪೂರ-1	ಪರಿಶಿಷ್ಟ ಪಂಗಡ
130	ಯಾದಗಿರ	ಗ್ರಾಮೀಣ	ಬೆಳಗುಂದಿ	ಅನೂರು ಬಿ-1	ಇತರೆ
131	ಯಾದಗಿರ	ಗ್ರಾಮೀಣ	ಬೆಳಗುಂದಿ	ಅನೂರು ಕೆ-1	ಇತರೆ
132	ಯಾದಗಿರ	ಗ್ರಾಮೀಣ	ಬೆಳಗುಂದಿ	ಬೆಳಗುಂದಿ-2	ಇತರೆ
133	ಯಾದಗಿರ	ಗ್ರಾಮೀಣ	ಬೆಳಗುಂದಿ	ಅನೂರು ಬಿ-2	ಪರಿಶಿಷ್ಟ ಜಾತಿ
134	ಯಾದಗಿರಿ	ಗ್ರಾಮೀಣ	ಮಲ್ಹಾರ	ಸಂಗ್ಹಾರ-2	ಇತರೆ
135	ಯಾದಗಿರಿ	ಗ್ರಾಮೀಣ	ಮಲ್ಹಾರ	ಸಾವೂರು-1	ಇತರೆ
136	ಯಾದಗಿರ	ಗ್ರಾಮೀಣ	ಮಲ್ಹಾರ	ಹೆಗ್ಗಣಗೇರಾ	ಇತರೆ
137	ಯಾದಗಿರ	ಗ್ರಾಮೀಣ	ಮಲ್ಹಾರ	ಲಿಂಗೇರಿ-2	ಇತರೆ
138	ಯಾದಗಿರ	ಗ್ರಾಮೀಣ	ಮುಂಡರಗಿ	ಮುಂಡರಗಿ ತಾಂಡಾ-2	ಪರಿಶಿಷ್ಟ ಜಾತಿ
139	ಯಾದಗಿರ	ನಗರ	ಯಾದಗಿರ	ಬೊವಿವಾಡ	ಇತರೆ
140	ಯಾದಗಿರ	ನಗರ	ಯಾದಗಿರ	ಶಹಾಪೂರ ಪೇಠ-1	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
141	ಯಾದಗಿರ	ಗ್ರಾಮೀಣ	ರಾಮಸಮುದ್ರ	ರಾಮಸಮುದ್ರ-1	ಪರಿಶಿಷ್ಟ ಜಾತಿ
142	ಯಾದಗಿರ	ಗ್ರಾಮೀಣ	ವರ್ಕನಳ್ಳಿ	ವರ್ಕನಳ್ಳಿ-2	ಪರಿಶಿಷ್ಟ ಪಂಗಡ
143	ಯಾದಗಿರ	ಗ್ರಾಮೀಣ	ವರ್ಕನಳ್ಳಿ	ಎಂ ಹೊಸಳ್ಳಿ	ಪರಿಶಿಷ್ಟ ಪಂಗಡ
144	ಯಾದಗಿರ	ಗ್ರಾಮೀಣ	ಸೈದಾಪುರ	ರಾಚನಳ್ಳಿ	ಇತರೆ
145	ಯಾದಗಿರ	ಗ್ರಾಮೀಣ	ಹಳಿಗೇರಾ	ಆರ್ ಹೊಸಳ್ಳಿ-2	ಪರಿಶಿಷ್ಟ ಜಾತಿ
146	ಯಾದಗಿರ	ಗ್ರಾಮೀಣ	ಹೆಡಗಿಮದ್ರಾ	ಹೆಡಗಿಮದ್ರಾ-3	ಇತರೆ
147	ಗುರುಮಠಕಲ್	ಗ್ರಾಮೀಣ	ಅಜಲಾಪೂರ	ಬಸ್ಸಾಪೂರ	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
148	ಗುರುಮಠಕಲ್	ಗ್ರಾಮೀಣ	ಅನಪೂರ	ನಸಲವಾಯಿ-3	ಇತರೆ
149	ಗುರುಮಠಕಲ್	ಗ್ರಾಮೀಣ	ಅರಕೇರಾ.ಬಿ	ಅರಕೇರಾ.ಬಿ. ತಾಂಡಾ	ಪರಿಶಿಷ್ಟ ಜಾತಿ
150	ಗುರುಮಠಕಲ್	ಗ್ರಾಮೀಣ	ಅಲ್ಲಿಪೂರ	ಜಕನಲತಾಂಡಾ (ಹೊರುಂಚಾತಾಂಡಾ)	ಪರಿಶಿಷ್ಟ ಜಾತಿ

For more job news visit : www.kpscvaani.com

ಕ್ರ.ಸಂ	ಯೋಜನೆಯ ಹೆಸರು	ನಗರ/ ಗ್ರಾಮೀಣ	ನಗರ/ಗ್ರಾಮ ಪಂಚಾಯತ	ಅಂಗನವಾಡಿ ಕೇಂದ್ರದ ಹೆಸರು	ಇತ್ತೀಚಿನ ನೇಮಕಾತಿ ಸರ್ಕಾರಿ ಆದೇಶ ಅನ್ವಯ ನಿಗದಿ ಪಡಿಸಿದ ಮೀಸಲಾತಿ
1	2	3	4	5	6
151	ಗುರುಮಠಕಲ್	ಗ್ರಾಮೀಣ	ಅಲ್ಲಿಪೂರ	ಅಲ್ಲಿಪೂರ ಸಣ್ಣ ತಾಂಡಾ	ಪರಿಶಿಷ್ಟ ಜಾತಿ
152	ಗುರುಮಠಕಲ್	ಗ್ರಾಮೀಣ	ಎಲ್ಕೋರಿ	ನವಾಬುರ್ಜ್	ಇತರೆ
153	ಗುರುಮಠಕಲ್	ಗ್ರಾಮೀಣ	ಕೊಂಕಲ್	ನಂದೇಪಲ್ಲಿ-3	ಇತರೆ
154	ಗುರುಮಠಕಲ್	ಗ್ರಾಮೀಣ	ಗಾಜರಕೋಟ	ಶಿವಪೂರ-1	ಇತರೆ
155	ಗುರುಮಠಕಲ್	ನಗರ	ಗುರುಮಠಕಲ್	ಮಲ್ಲಯ್ಯಕಟ್ಟಾ-2	ಇತರೆ
156	ಗುರುಮಠಕಲ್	ನಗರ/	ಗುರುಮಠಕಲ್	ನೇಕಾರ ಓಣಿ ಗುರುಮಠಕಲ್	ಇತರೆ (ಅಲ್ಪ ಸಂಖ್ಯಾತ ಸಮುದಾಯ ಭಾಷೆ ಬಲ್ಲವರು)
157	ಗುರುಮಠಕಲ್	ಗ್ರಾಮೀಣ	ಚಂಡ್ರಿಕಿ	ಚಂಡ್ರಿಕಿ-1	ಇತರೆ
158	ಗುರುಮಠಕಲ್	ಗ್ರಾಮೀಣ	ಚಪೇಟ್ಲಾ	ಚಪೇಟ್ಲಾ-4	ಇತರೆ
159	ಗುರುಮಠಕಲ್	ಗ್ರಾಮೀಣ	ಚಿನ್ನಾಕಾರ	ಬೆಟ್ಟದಳ್ಳಿ-1	ಪರಿಶಿಷ್ಟ ಜಾತಿ
160	ಗುರುಮಠಕಲ್	ಗ್ರಾಮೀಣ	ಜೈಗ್ರಾಮ	ಜೈಗ್ರಾಮ-3	ಇತರೆ
161	ಗುರುಮಠಕಲ್	ಗ್ರಾಮೀಣ	ಬಂದಳ್ಳಿ	ಬಂದಳ್ಳಿ-1	ಇತರೆ
162	ಗುರುಮಠಕಲ್	ಗ್ರಾಮೀಣ	ಬಂದಳ್ಳಿ	ಬಂದಳ್ಳಿ-2	ಪರಿಶಿಷ್ಟ ಜಾತಿ
163	ಗುರುಮಠಕಲ್	ಗ್ರಾಮೀಣ	ಮಿನಾಸಪೂರ	ಮಿನಾಸಪೂರ-4	ಇತರೆ
164	ಗುರುಮಠಕಲ್	ಗ್ರಾಮೀಣ	ಮಿನಾಸಪೂರ	ನಜರಾಪೂರ ತಾಂಡಾ	ಪರಿಶಿಷ್ಟ ಜಾತಿ
165	ಗುರುಮಠಕಲ್	ಗ್ರಾಮೀಣ	ಯರಗೋಳ	ಯರಗೋಳ-1	ಇತರೆ
166	ಗುರುಮಠಕಲ್	ಗ್ರಾಮೀಣ	ಯರಗೋಳ	ಯರಗೋಳ-07	ಇತರೆ
167	ಗುರುಮಠಕಲ್	ಗ್ರಾಮೀಣ	ಯರಗೋಳ	ಲಿಂಗಸನಳ್ಳಿತಾಂಡಾ	ಪರಿಶಿಷ್ಟ ಜಾತಿ
168	ಗುರುಮಠಕಲ್	ಗ್ರಾಮೀಣ	ಹತ್ತಿಕುಣಿ	ಗೋಪುನಾಯಕ ತಾಂಡಾ	ಇತರೆ
169	ಗುರುಮಠಕಲ್	ಗ್ರಾಮೀಣ	ಹತ್ತಿಕುಣಿ	ಹತ್ತಿಕುಣಿ ತಾಂಡಾ	ಪರಿಶಿಷ್ಟ ಜಾತಿ
170	ಗುರುಮಠಕಲ್	ಗ್ರಾಮೀಣ	ಹೊನಗೇರಾ	ಕೆ.ಶಹಾಪೂರ-1	ಇತರೆ
171	ಗುರುಮಠಕಲ್	ಗ್ರಾಮೀಣ	ಹೊನಗೇರಾ	ಕೆ.ಶಹಾಪೂರ-3	ಇತರೆ

ಆಪನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ

For more job news visit : www.kpscvaani.com

S/23340
07/12/22

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗನವಾಡಿ ಕಾರ್ಯಕರ್ತೆಯರ/ಸಹಾಯಕಿಯರನ್ನು ಆಯ್ಕೆ ಮಾಡಲು ಹೊರಡಿಸಿದ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಮಮಇ 237 ಐಸಿಡಿ 2012, ದಿನಾಂಕ: 15-06-2012.
2. ಸರ್ಕಾರದ ಆದೇಶ ಸಂಖ್ಯೆ: ಮಮಇ 89 ಐಸಿಡಿ 2014, ದಿನಾಂಕ: 19-04-2014.
3. ಸರ್ಕಾರದ ಆದೇಶ ಸಂಖ್ಯೆ: ಮಮಇ 303 ಐಸಿಡಿ 2017, ದಿನಾಂಕ: 23-09-2017.
4. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಮಮಇ 27 ಐಸಿಡಿ 2017, ದಿನಾಂಕ: 01-12-2017.
5. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಮಮಇ 303 ಐಸಿಡಿ 2017, ದಿನಾಂಕ: 19-01-2019.
6. ಸರ್ಕಾರದ ಆದೇಶ ಸಂಖ್ಯೆ: ಮಮಇ 308 ಐಸಿಡಿ 2018, ದಿನಾಂಕ: 02-02-2019.
7. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಮಮಇ 303 ಐಸಿಡಿ 2017, ದಿನಾಂಕ: 15-06-2020.
8. ಸರ್ಕಾರದ ಆದೇಶ ಸಂಖ್ಯೆ: ಮಮಇ 154 ಐಸಿಡಿ 2020, ದಿನಾಂಕ: 31-12-2020.
9. ಸರ್ಕಾರದ ಆದೇಶ ತಿದ್ದುಪಡಿ ಆದೇಶ ಸಂಖ್ಯೆ: ಮಮಇ 152 ಐಸಿಡಿ 2021, ದಿನಾಂಕ: 01-06-2021.
10. ಸರ್ಕಾರದ ಆದೇಶ ಸಂಖ್ಯೆ: ಮಮಇ 154 ಐಸಿಡಿ 2020, ದಿನಾಂಕ: 07-02-2022.
11. ಸರ್ಕಾರದ ಆದೇಶ ಸಂಖ್ಯೆ: ಮಮಇ 190 ಐಸಿಡಿ 2021, ದಿನಾಂಕ: 05-03-2022.
12. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಮಮಇ 154 ಐಸಿಡಿ 2020, ದಿನಾಂಕ: 26-05-2022.
13. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಮಮಇ 154 ಐಸಿಡಿ 2020, ದಿನಾಂಕ: 26-05-2022.
14. ಸರ್ಕಾರದ ಆದೇಶ ಸಂಖ್ಯೆ: ಮಮಇ 154 ಐಸಿಡಿ 2020, ದಿನಾಂಕ: 26-05-2022.
15. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಏಕ ಕಡತ ಸಂಖ್ಯೆ:WCD/ICDS/ANG1/5/2022-DD ICDS-WOMEN AND CHILD DEVELOPMENT ದಿನಾಂಕ:27-10-2022.

*****

ಪ್ರಸ್ತಾವನೆ:

ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರ/ಸಹಾಯಕಿಯರನ್ನು ಆಯ್ಕೆ ಮಾಡಲು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ:15-06-2012ರ ಆದೇಶದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು ಹಾಗೂ ಸದರಿ ಮಾರ್ಗಸೂಚಿಗಳನ್ನು ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 19-04-2014ರ ಆದೇಶದಲ್ಲಿ ಪರಿಷ್ಕರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರ/ಸಹಾಯಕಿಯರ ಆಯ್ಕೆಯನ್ನು ಆನ್‌ಲೈನ್ ಮುಖಾಂತರ ಮಾಡಲು ಹಾಗೂ ತಿದ್ದುಪಡಿಗಳನ್ನು ಅಳವಡಿಸಿಕೊಂಡು ದಿನಾಂಕ: 19-04-2014ರ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶಿಸಲಾಗಿತ್ತು.

2..

For more job news visit : www.kpscvaani.com

ಮೇಲೆ ಓದಲಾದ ಕ್ರಮ ಸಂಖ್ಯೆ (15)ರ ಏಕ ಕಡತದಲ್ಲಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮಾನ್ಯ ಇಲಾಖಾ ಸಚಿವರು ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರನ್ನು ಆಯ್ಕೆ ಮಾಡಲು ದಿನಾಂಕ: 23/09/2017 ರ ಮಾರ್ಗಸೂಚಿಗಳನ್ನು ಮತ್ತು ಅರ್ಹತಾ ಮಾನದಂಡಗಳನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ, ಅಂಗನವಾಡಿ ಕಾರ್ಯಕರ್ತೆಯರ /ಸಹಾಯಕಿಯರನ್ನು ಆಯ್ಕೆ ಮಾಡಲು ಹೊರಡಿಸಲಾದ ಕ್ರಮ ಸಂಖ್ಯೆ (4) ರಿಂದ (14)ರಲ್ಲಿ ಓದಲಾದ ಆದೇಶಗಳಲ್ಲಿ ಕೆಲವು ಸೇರ್ಪಡೆ ಮತ್ತು ತಿದ್ದುಪಡಿಗಳನ್ನು ಮಾಡಿರುವುದರಿಂದ ಅವುಗಳನ್ನು ಅಳವಡಿಸಿಕೊಂಡು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನೇಮಕಾತಿಯನ್ನು ಆನ್‌ಲೈನ್ ಮುಖಾಂತರ ಮಾಡಲು ಅನುಕೂಲವಾಗುವಂತೆ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಮಮಇ 154 ಐಸಿಡಿ 2020, ಬೆಂಗಳೂರು,</u>
<u>ದಿನಾಂಕ: 03-12-2022</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಯನ್ನು ಆನ್‌ಲೈನ್ ಮುಖಾಂತರ ನಡೆಸಲು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ದಿನಾಂಕ: 23-09-2017 ಆದೇಶದಲ್ಲಿನ ಮಾರ್ಗಸೂಚಿಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪರಿಷ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

N.S.Khetkulkar
03/12/2022

(ನಿರ್ಮಲಾ ಎಸ್. ಖಟಾವ್‌ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇನತರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

03/12

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ:5398, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಆಬಿವೃದ್ಧಿ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು .
4. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್.
5. ಎಲ್ಲಾ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು.
6. ಎಲ್ಲಾ ಆಯ್ಕೆ ಸಮಿತಿಯ ಸದಸ್ಯರು.
7. ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು
    (ಕ್ರ.ಸಂ. 3-7 ನಿರ್ದೇಶನಾಲಯದ ಮುಖಾಂತರ)

For more job news visit : www.kpscvaani.com

3) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆ ಸಮಿತಿ
4) ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಉಪಾಧ್ಯಕ್ಷರು ಅಧ್ಯಕ್ಷರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆ ಸಮಿತಿ
5) ಆಯುಕ್ತರು / ಉಪ ಆಯುಕ್ತರು ನಗರ ಸಭೆ / ನಗರ ಪಾಲಿಕೆ / ಮಹಾನಗರ ಪಾಲಿಕೆ / ಬಿಬಿಎಂಪಿ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆ ಸಮಿತಿ
6) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆ ಸಮಿತಿ
7) ತಹಶೀಲ್ದಾರರು ಹಾಗೂ ಅಧ್ಯಕ್ಷರು, ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆ ಸಮಿತಿ
8) ತಾಲ್ಲೂಕು ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಉಪಾಧ್ಯಕ್ಷರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ
9) ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು / ಆಯುಕ್ತರು, ಪುರಸಭೆ / ಪಟ್ಟಣ ಪಂಚಾಯತಿ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ
10) ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ

(ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆ ಸಮಿತಿ & ಅರ್ಜಿಗಳ ಪರಿಶೀಲನಾ ಸಮಿತಿ ಸದಸ್ಯರುಗಳಿಗೆ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ)

For more job news visit : www.kpscvaani.com

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಆಯ್ಕೆ ಮಾಡಲು ಹೊರಡಿಸಿದ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಕುರಿತು.

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಯ ಮಾನದಂಡಗಳು

I. **ಅರ್ಹತೆ:** ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

II. **ವಯೋಮಿತಿ:**

ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಲು 19-35 ವರ್ಷ ವಯೋಮಿತಿಯೊಳಗಿನ ಹೆಣ್ಣು ಮಕ್ಕಳು ಹಾಗೂ ಮಹಿಳಾ ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು ಹಾಗೂ ವಿಕಲಚೇತನರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

III. **ಸ್ಥಳೀಯತೆ:**

1. ಗ್ರಾಮಾಂತರ ಪ್ರದೇಶದ ಅಂಗನವಾಡಿ ಕೇಂದ್ರವಾದಲ್ಲಿ ಆಯಾ ಕಂದಾಯ ಗ್ರಾಮದಲ್ಲಿ ವಾಸ್ತವ್ಯ ಹೊಂದಿರಬೇಕು. ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಆಯ್ಕೆಗೆ ಸ್ಥಳೀಯ ಮಜಿರೆ, ತಾಂಡಾ ಹಾಗೂ ಹಾಡಿಗೆ ಸೇರಿದವರಾಗಿದ್ದರೆ ಸಂಬಂಧಿಸಿದ ವಾಸ್ತವ್ಯ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯುವುದು.
2. ನಗರ ಪ್ರದೇಶದ ಅಂಗನವಾಡಿ ಕೇಂದ್ರವಾದಲ್ಲಿ ಆಯಾ ಕಂದಾಯ ವಾರ್ಡ್‌ನಲ್ಲಿ ವಾಸ್ತವ್ಯ ಹೊಂದಿರಬೇಕು ಹಾಗೂ ವಾಸ್ತವ್ಯ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದಿರಬೇಕು. [ಚುನಾವಣಾ ವಾರ್ಡ್‌ಗಳನ್ನು ಪರಿಗಣಿಸುವಂತಿಲ್ಲ]
3. ತಹಶೀಲ್ದಾರ್ / ಉಪ ತಹಶೀಲ್ದಾರ್‌ರವರ ಮೂರು ವರ್ಷದ ವಾಸ್ತವ್ಯ ದೃಢೀಕರಣದೊಂದಿಗೆ ಸ್ಥಳೀಯರು ಎಂಬುದನ್ನು ದೃಢೀಕರಿಸಲು ಪೂರಕ ದಾಖಲೆಗಳಾಗಿ ಆಧಾರ ಕಾರ್ಡ್, ರೇಷನ್ ಕಾರ್ಡ್ ಮತದಾರರ ಗುರುತಿನ ಚೀಟಿಗಳನ್ನು ಪಡೆಯುವುದು. ಮಜಿರೆ, ತಾಂಡಾ ಹಾಗೂ ಹಾಡಿಗೆ ಸೇರಿದವರಾಗಿದ್ದರೆ ಸಂಬಂಧಿಸಿದ ವಾಸ್ತವ್ಯ ಪ್ರಮಾಣ ಪತ್ರ ಪಡೆಯುವುದು.

IV. **ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ವಿದ್ಯಾರ್ಹತೆ:-**

1. ಕನಿಷ್ಟ P.U.C. ತೇರ್ಗಡೆ ಹೊಂದಿರಬೇಕು. S.S.L.C.ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಓದಿರಬೇಕು.
2. ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಂದರ್ಭದಲ್ಲಿ "ಸರ್ಕಾರದ ಅಂಗೀಕೃತ ಸಂಸ್ಥೆಗಳಿಂದ D.S.E.R.T.ಯಿಂದ ECCE ಡಿಪ್ಲೊಮಾ ಕೋರ್ಸ್, JOC ಕೋರ್ಸ್, N.T.T. ಕೋರ್ಸ್‌ಗಳನ್ನು ಹಾಗೂ ಅಂಗನವಾಡಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಡಿಪ್ಲೊಮಾ ನ್ಯೂಟ್ರಿಷಿಯನ್, ಹೋಂ ಸೈನ್ಸ್ ಸರ್ಟಿಫಿಕೇಟ್ ಕೋರ್ಸ್, ಒಂದು ವರ್ಷದ ನರ್ಸರಿ ಅಥವಾ ಪೂರ್ವ ಪ್ರಾಥಮಿಕ ತರಬೇತಿ ಪಡೆದು ಪ್ರಮಾಣ ಪತ್ರ ಹೊಂದಿದವರಿಗೆ ಮೊದಲ ಆದ್ಯತೆ ನೀಡುವುದು ಹಾಗೂ ಸದರಿಯವರಿಗೆ ಬೋನಸ್ +5 ಅಂಕಗಳನ್ನು ನೀಡುವುದು.

For more job news visit : www.kpscvaani.com

V. **ಅಂಗನವಾಡಿ ಸಹಾಯಕಿ ವಿದ್ಯಾರ್ಹತೆ:-** ಹುದ್ದೆಗೆ ಕನಿಷ್ಟ ವಿದ್ಯಾರ್ಹತೆ SSLC ಅಥವಾ ತತ್ಸಮಾನ ತರಗತಿಯಲ್ಲಿ ಉತ್ತೀರ್ಣವಾಗಿರಬೇಕು.

ಅ) ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ/ಮುಕ್ತ ವಿದ್ಯಾಲಯಗಳಲ್ಲಿ S.S.L.C. ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ/ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜ ಶಾಸ್ತ್ರ/ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು ಪ್ರಮಾಣ ಪತ್ರ/ಅಂಕಪಟ್ಟಿಯು ಗರಿಷ್ಟ 625 ಕನಿಷ್ಟ 219 ಅಂಕಗಳನ್ನು ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಪರಿಗಣಿಸತಕ್ಕದ್ದು.

ಆ) ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ್ದರೂ SSLC ಪರೀಕ್ಷೆಗೆ ಆ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಟ ಹಾಗೂ ಕನಿಷ್ಟ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಟ ಹಾಗೂ ಕನಿಷ್ಟ ಅಂಕದಲ್ಲಿ ವ್ಯತ್ಯಾಸವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸತಕ್ಕದ್ದು.

ಇ) ಅಂಗನವಾಡಿ ಸಹಾಯಕಿಯರು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹಾ ಅವರು ಕನ್ನಡ ಭಾಷೆಯನ್ನು ಪ್ರಥಮ /ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು. ಹಾಗೂ ಮಾತೃಭಾಷೆ ಕನ್ನಡವಲ್ಲದೇ ಇರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯು ಆಯ್ಕೆ ಸಮಯದಲ್ಲಿ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಭಾಷೆಯ ಜ್ಞಾನದ ಕುರಿತಂತೆ ಓದಿಸಿ, ಬರೆಸಿ ಅವರ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಿ ಅವರನ್ನು ಆಯ್ಕೆ ಮಾಡುವ ಬಗ್ಗೆ ಸಮಿತಿಯವರು ನಿರ್ಧರಿಸುವುದು.

VI. **<u>ಜನಸಂಖ್ಯಾ ಆಧಾರದ ಮೇಲೆ ಮೀಸಲಾತಿ :-</u>**

ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗೆ ಶೇ. 25 ರಷ್ಟು ಅಲ್ಪಸಂಖ್ಯಾತ ಸಮುದಾಯದ ಜನಸಂಖ್ಯೆ ಇರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನು ಕಾರ್ಯಕರ್ತೆ / ಸಹಾಯಕಿಯ ಹುದ್ದೆಗೆ ಆಯ್ಕೆ ಮಾಡುವುದು. ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಬೇಕು. ವಯಸ್ಸು ಸಮಾನವಾಗಿದ್ದಲ್ಲಿ ವಿಧವೆಯರನ್ನು ಪರಿಗಣಿಸಬೇಕು.

VII) **<u>ಅಂಗನವಾಡಿ ಕೇಂದ್ರಗಳ ವ್ಯಾಪ್ತಿ ಗುರುತಿಸುವಿಕೆ:</u>**

1. ಒಂದು ಗ್ರಾಮದಲ್ಲಿ ಈಗಾಗಲೇ ಅಂಗನವಾಡಿ ಕೇಂದ್ರವಿದ್ದು ಪುನಃ ಬೇಡಿಕೆಗೆ ಅನುಸಾರವಾಗಿ ಹೊಸ ಕೇಂದ್ರವನ್ನು ಪ್ರಾರಂಭಿಸುತ್ತಿದ್ದಲ್ಲಿ ಹೊಸ ಕೇಂದ್ರ ಪ್ರಾರಂಭಿಸುವ ಪ್ರದೇಶದ (ವ್ಯಾಪ್ತಿಯ) ಜನಸಂಖ್ಯೆಯಲ್ಲಿ ಶೇ. 40ಕ್ಕಿಂತ ಹೆಚ್ಚು ಜನಸಂಖ್ಯೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದವರಿದ್ದಲ್ಲಿ ಆ ಅಂಗನವಾಡಿ ಕೇಂದ್ರಕ್ಕೆ ಸದರಿ ವರ್ಗದವರಿಗೆ ಕಾರ್ಯಕರ್ತೆ/ಸಹಾಯಕಿ ಹುದ್ದೆಯನ್ನು ನಿಗದಿಪಡಿಸಿ ಪ್ರಕಟಣೆ ಹೊರಡಿಸಿ ಸದರಿ ಗ್ರಾಮ/ನಗರ ಪ್ರದೇಶದಲ್ಲಿ ಕಂದಾಯ ವಾರ್ಡ್‌ನಿಂದ ಅರ್ಜಿಗಳನ್ನು ಆಹ್ವಾನಿಸಿ ಆ ವರ್ಗದವರನ್ನೇ ಆಯ್ಕೆ ಮಾಡುವುದು.

For more job news visit : www.kpscvaani.com

VIII. <u>ಆಯ್ಕೆ ಆದ್ಯತೆ:-</u>

1. **ಆಸಿಡ್ ದಾಳಿಗೆ ತುತ್ತಾದ ಮಹಿಳೆಯರ ಆಯ್ಕೆ:-**

ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಹ ಅಭ್ಯರ್ಥಿಗೆ +5 ಬೋನಸ್ ಅಂಕಗಳನ್ನು ನೀಡುವುದು.

2. **ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ :-**

ಇಲಾಖೆಯ ಸುಧಾರಣಾ ಸಂಸ್ಥೆ / ರಾಜ್ಯ ಮಹಿಳಾ ನಿಲಯಗಳ ನಿವಾಸಿಗಳು ಕನಿಷ್ಟ 3 ವರ್ಷ ಸಂಸ್ಥೆಯಲ್ಲಿರಬೇಕು ಹಾಗೂ ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ನಿವಾಸಿ ಪ್ರಮಾಣ ಪತ್ರ ನೇಮಕಾತಿ ಪ್ರಕ್ರಿಯೆಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ +10 ಬೋನಸ್ ಅಂಕಗಳನ್ನು ನೀಡುವುದು. ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುವ ಆ ಜಿಲ್ಲೆಯಲ್ಲಿ ಎಲ್ಲಿಯಾದರೂ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

3. **ವಿಧವೆಯರ ಆಯ್ಕೆ:-**

ನೇಮಕಾತಿ ಪ್ರಕ್ರಿಯೆಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ +5 ಬೋನಸ್ ಅಂಕಗಳನ್ನು ನೀಡುವುದು. ಮರಣ ಪ್ರಮಾಣಪತ್ರ, ವಿಧವಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.

4. <u>**ಅಂಗವಿಕಲರ ಆಯ್ಕೆ:-**</u>

- ದೈಹಿಕ ಅಂಗವಿಕಲತೆಯ ಪ್ರಮಾಣವನ್ನು ಶೇ.40ಕ್ಕಿಂತ ಹೆಚ್ಚಿರದ ಹಾಗೆ ನಿಗದಿಪಡಿಸುವುದು. ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ +5 ಬೋನಸ್ ಅಂಕಗಳನ್ನು ನೀಡುವುದು. ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೊ ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

- ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣದ ಬಗ್ಗೆ ಸಂಶಯ ಉಂಟಾದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ಪರಿಶೀಲಿಸಿ ನಿರ್ಧರಿಸತಕ್ಕದ್ದು.

IX **ಬೋನಸ್ ಅಂಕಗಳು: (ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ)**

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಬೇಕು. ವಯಸ್ಸು ಸಮಾನವಾಗಿದ್ದಲ್ಲಿ ವಿಧವೆ/ ವಿಚ್ಛೇದಿತೆಯರನ್ನು ಪರಿಗಣಿಸಬೇಕು. ಮಾಜಿ ದೇವದಾಸಿಯ ಮಗಳು, ಯೋಜನಾ ನಿರಾಶ್ರಿತರು, ವಿಚ್ಛೇದಿತ ಮಹಿಳೆಯರು ಇವರುಗಳಿಗೆ +5 ಬೋನಸ್ ಅಂಕಗಳನ್ನು ನಿಗದಿಪಡಿಸುವುದು. (ಅಧಿಕೃತ ಪ್ರಮಾಣಪತ್ರ ನೀಡುವ ಪರತ್ತಿಗೊಳಪಟ್ಟು)

X **ಆನ್ ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:-**

1. ಅರ್ಜಿ ನಿಗದಿತ ನಮೂನೆಯಲ್ಲಿ (ಆನ್ ಲೈನ್)
2. ಜನನ ಪ್ರಮಾಣ ಪತ್ರ/ಜನ್ಮ ದಿನಾಂಕ ಇರುವ S.S.L.C.ಅಂಕಪಟ್ಟಿ
3. ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ
4. ತಹಶೀಲ್ದಾರರು/ಉಪ ತಹಶೀಲ್ದಾರರಿಂದ ಪಡೆದ ಮೂರು (3) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ

For more job news visit : www.kpscvaani.com

5. ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ
6. ಪತಿಯ ಮರಣ ಪ್ರಮಾಣ ಪತ್ರ ಹಾಗೂ ವಿಧವಾ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ)
7. ಅಂಗವಿಕಲತೆ ಪ್ರಮಾಣಪತ್ರ (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ)
8. ವಿಚ್ಛೇದನ ಪ್ರಮಾಣ ಪತ್ರ (ನ್ಯಾಯಾಲಯದಿಂದ ಪಡೆದಿರಬೇಕು)
9. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
10. ಇಲಾಖೆಯ ಸುಧಾರಣಾ ಸಂಸ್ಥೆ /ರಾಜ್ಯ ಮಹಿಳಾ ನಿಲಯಗಳ ನಿವಾಸಿಗಳು ಕನಿಷ್ಟ 3 ವರ್ಷ ಸಂಸ್ಥೆಯಲ್ಲಿರಬೇಕು. ಹಾಗೂ ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ನಿವಾಸಿ ಪ್ರಮಾಣ ಪತ್ರ
11. ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ
12. ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ
13. ಎಲ್ಲಾ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಣ ಮಾಡಿಸಿ ಸಲ್ಲಿಸುವುದು.

XI. ಆಯ್ಕೆ ವಿಧಾನ:-

1. ಅರ್ಜಿ ಸಲ್ಲಿಸಲು ಕನಿಷ್ಟ ಒಂದು ತಿಂಗಳು ನಿಗದಿಪಡಿಸಬೇಕು.
2. ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದ ನಂತರ ಮುಂದಿನ 7 ಕೆಲಸದ ದಿನಗಳೊಳಗೆ ಸಮಿತಿ ಸಭೆ ಸೇರಬೇಕು.
3. ಆಯ್ಕೆ ಸಮಿತಿಯ ಎಲ್ಲಾ ಸದಸ್ಯರು ಹಾಜರಾಗಲು ಸಾಧ್ಯವಾಗದಂತಹ ಅನಿವಾರ್ಯ ಕಾರಣಗಳಿದ್ದಲ್ಲಿ ಕನಿಷ್ಟ 2/3ರಷ್ಟು ಸದಸ್ಯರು ಕಡ್ಡಾಯವಾಗಿ ಹಾಜರಿರಬೇಕು.
4. ಆನ್‌ಲೈನ್ ನಲ್ಲಿ ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ಅಂದೇ ಪರಿಶೀಲಿಸುವುದು
5. ಆನ್‌ಲೈನ್ ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆಯನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದು ಮತ್ತು ಅಸ್ಪಷ್ಟ / ಅಪೂರ್ಣ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
6. ಸ್ವೀಕೃತವಾದ ಅರ್ಜಿಗಳನ್ನು ವಿದ್ಯಾರ್ಹತೆಯಲ್ಲಿ ಪಡೆದ ಅಂಕ ಮತ್ತು ಬೋನಸ್ ಅಂಕಗಳನ್ನು ಒಳಗೊಂಡಂತೆ ಪಡೆದ ಒಟ್ಟು ಅಂಕಗಳಿಗನುಸಾರವಾಗಿ ಕ್ರೋಢೀಕೃತ ಪಟ್ಟಿಯನ್ನು ಅನ್ ಲೈನ್ ನಲ್ಲಿ ಸಿದ್ಧಪಡಿಸಿ ಅರ್ಹತೆ ಮತ್ತು ಮೆರಿಟ್‌ಗನುಸಾರವಾಗಿ ಪರಿಶೀಲಿಸಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂದೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು.
7. ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಒಂದು ವಾರ (7 ದಿನಗಳು) ಕಾಲಾವಕಾಶ ನೀಡುವುದು. ಹಾಗೂ ಕಾಲಾವಕಾಶ ಮುಗಿದ ಮುಂದಿನ ಕೆಲಸದ ದಿನವೇ ಸಮಿತಿಯ ಸಭೆ ಕರೆದು ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಕ್ರೋಢೀಕರಿಸಿ ಚರ್ಚಿಸಿ ಕಾರ್ಯಕರ್ತೆ/ ಸಹಾಯಕಿಯರ ಅಂತಿಮ ಆಯ್ಕೆ ಪಟ್ಟಿಯನ್ನು ಅಂದೇ ಸೂಚನಾ ಫಲಕದಲ್ಲಿ ಪ್ರಕಟಿಸುವುದು.
8. ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಕಂಡು ಬಂದಲ್ಲಿ ನೇಮಕಾತಿ ಪ್ರಾಧಿಕಾರವೇ ಚರ್ಚಿಸಿ ನಿಯಮಾನುಸಾರ ಕ್ರಮ ವಹಿಸುವುದು. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.
9. ಆಯ್ಕೆ ನಡವಳಿ ಪುಸ್ತಕದಲ್ಲಿ ಆಯ್ಕೆ ಸಮಿತಿಗೆ ಹಾಜರಾದ ಎಲ್ಲಾ ಸದಸ್ಯರ ಹಾಜರಾತಿ ಪಡೆಯುವುದು. ಆಯ್ಕೆ ಪ್ರಕ್ರಿಯೆ ಮುಗಿದ ನಂತರ ನಡವಳಿಗಳನ್ನು ಸವಿವರವಾಗಿ (speaking order), ಕೇಂದ್ರವಾರು ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು ಯಾವ ಮಾನದಂಡಗಳನ್ವಯ ಆಯ್ಕೆ ಮಾಡಲಾಗಿದೆ? ಎಂಬ ಷರಾದೊಂದಿಗೆ ನಡವಳಿಯಲ್ಲಿ ದಾಖಲಿಸಿ ಯಾವುದೇ ತಿದ್ದುಪಡಿಗಳಿದ್ದಲ್ಲಿ

For more job news visit : www.kpscvaani.com

ಸಕಾರಣದೊಂದಿಗೆ ದೃಢೀಕರಿಸಿ ಹಾಜರಿರುವ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರ ಸಹಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

10. ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯಾಗಿ ಕಾರ್ಯ ನಿರ್ವಹಿಸಲು ನೇಮಕಾತಿ ಆದೇಶಗಳನ್ನು ಹೊರಡಿಸಬೇಕು.

11. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯ ಹುದ್ದೆಯು ಸಂಪೂರ್ಣವಾಗಿ ಗೌರವ ಸೇವೆಯಾಗಿದ್ದು, ಖಾಯಂ ಹುದ್ದೆಯಲ್ಲವೆಂದು ನೇಮಕಾತಿ ಆದೇಶದಲ್ಲಿ ತಿಳಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮೂಲ ದಾಖಲಾತಿಗಳು, ವೈದ್ಯಕೀಯ ಪ್ರಮಾಣ ಪತ್ರ (ಫಿಟ್‌ನೆಸ್ ಸರ್ಟಿಫಿಕೇಟ್) ಗಳನ್ನು ಹಾಜರುಪಡಿಸಿ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪರಿಶೀಲಿಸಿ ವರದಿ ಮಾಡಿಕೊಳ್ಳತಕ್ಕದ್ದು.

12. 6 ತಿಂಗಳು ಮುಂಚಿತವಾಗಿ ನಿವೃತ್ತಿಗೊಳ್ಳುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಪಟ್ಟಿ ಮಾಡಿ ಅವರ ಸ್ಥಾನಕ್ಕೆ ಆಯ್ಕೆ ಪ್ರಕ್ರಿಯೆಯನ್ನು ಪದೋನ್ನತಿ/ಸ್ಥಾನಪಲ್ಲಟ ನಂತರ ನೇಮಕಾತಿಯ ಮೂಲಕ ಹುದ್ದೆ ಭರ್ತಿ ಮಾಡಲು ತಯಾರಿ ಮಾಡಿಕೊಳ್ಳುವುದು. ಕೋರ್ಟ್ ಕೇಸ್ ಹೊರತು ಪಡಿಸಿ ಯಾವುದೇ ಕಾರಣಕ್ಕೂ ಗರಿಷ್ಠ 3 ತಿಂಗಳಿಗಿಂತ ಹೆಚ್ಚು ಅವಧಿಯ ವಿಳಂಬವನ್ನು ಮಾಡಬಾರದು.

13. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಸ್ತಾವನೆಯನ್ನು ಉಪ ನಿರ್ದೇಶಕರಿಗೆ ಸಲ್ಲಿಸುವುದು. ಉಪ ನಿರ್ದೇಶಕರು ಏಕಕಡತದಲ್ಲಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಆಯ್ಕೆ ಆದೇಶ ನೀಡುವುದು.

XII ಮಿನಿ ಅಂಗನವಾಡಿ ಕಾರ್ಯಕರ್ತೆ/ ಅಂಗನವಾಡಿ ಸಹಾಯಕಿಯರನ್ನು ಕಾರ್ಯಕರ್ತೆಯರನ್ನಾಗಿ ಪದೋನ್ನತಿಗೆ ಗುರುತಿಸುವ ವಿಧಾನದ ಕುರಿತು:-

- ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳಿಗೆ ಪಿ.ಯು.ಸಿ. ಉತ್ತೀರ್ಣ ಹೊಂದಿದ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮೊದಲ ಆದ್ಯತೆ ನೀಡುವುದು. ಅಂಗನವಾಡಿ ಸಹಾಯಕಿಯರು 5 ವರ್ಷ ಕನಿಷ್ಟ ಸೇವೆ , ಉತ್ತಮ ಸೇವಾ ದಾಖಲೆ, ಹಿರಿಯ ವಯೋಮಾನ ಹೊಂದಿದ ಸಹಾಯಕಿಯರನ್ನು ಹೆಚ್ಚಿನ ವಿದ್ಯಾರ್ಹತೆ ಹಾಗೂ ವಯಸ್ಸಿನ ಅನುಗುಣವಾಗಿ ಪದೋನ್ನತಿಗೆ ಪರಿಗಣಿಸುವುದು. ಹಾಗೂ ಅದೇ ಗ್ರಾಮ/ನಗರ ಪ್ರದೇಶದಲ್ಲಿ ಮೂರು ಕಿ.ಮೀ. ವ್ಯಾಪ್ತಿಯಲ್ಲಿ ವಾಸವಾಗಿರುವುದು.

XIII ಅನುಕಂಪದ ಆಧಾರದಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಗುರುತಿಸುವ ಬಗ್ಗೆ.

1. ಸೇವೆಯಲ್ಲಿರುವಾಗಲೇ ಮರಣ ಹೊಂದಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಮಗಳು ಅಥವಾ ಸೊಸೆಯನ್ನು ಅರ್ಹತೆಯ ಮೇಲೆ ಅವರ ತಾಯಿ/ಅತ್ತೆಯು ನಿರ್ವಹಿಸುತ್ತಿದ್ದ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯ ಹುದ್ದೆಗೆ ಅನುಕಂಪದ ಆಧಾರದಲ್ಲಿ ಆ ಕುಟುಂಬದ ಸದಸ್ಯರಿಂದ ನಿರಾಕ್ಷೇಪಣಾ ಪತ್ರವನ್ನು ನಿಗದಿತ ಮೊತ್ತದ ಛಾಪಾ ಕಾಗದದ ಮೇಲೆ ಪಡೆದು ನೇಮಕ ಮಾಡತಕ್ಕದ್ದು.

2. ಅಭ್ಯರ್ಥಿಯ ನಿಗದಿತ ವಿದ್ಯಾರ್ಹತೆ, ವಯೋಮಿತಿ ಮತ್ತು ಸ್ಥಳೀಯರಾಗಿರಬೇಕಾಗಿರುವುದು ಕಡ್ಡಾಯ ಹಾಗೂ ಉಳಿದ ಆಯ್ಕೆ ನಿಯಮಗಳು ಅನ್ವಯಿಸುತ್ತವೆ.

For more job news visit : www.kpscvaani.com

5. ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ
6. ಪತಿಯ ಮರಣ ಪ್ರಮಾಣ ಪತ್ರ ಹಾಗೂ ವಿಧವಾ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ)
7. ಅಂಗವಿಕಲತೆ ಪ್ರಮಾಣಪತ್ರ (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ)
8. ವಿಚ್ಛೇದನ ಪ್ರಮಾಣ ಪತ್ರ (ನ್ಯಾಯಾಲಯದಿಂದ ಪಡೆದಿರಬೇಕು)
9. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
10. ಇಲಾಖೆಯ ಸುಧಾರಣಾ ಸಂಸ್ಥೆ /ರಾಜ್ಯ ಮಹಿಳಾ ನಿಲಯಗಳ ನಿವಾಸಿಗಳು ಕನಿಷ್ಟ 3 ವರ್ಷ ಸಂಸ್ಥೆಯಲ್ಲಿರಬೇಕು. ಹಾಗೂ ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ನಿವಾಸಿ ಪ್ರಮಾಣ ಪತ್ರ
11. ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ
12. ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ
13. ಎಲ್ಲಾ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಣ ಮಾಡಿಸಿ ಸಲ್ಲಿಸುವುದು.

XI. ಆಯ್ಕೆ ವಿಧಾನ:-

1. ಅರ್ಜಿ ಸಲ್ಲಿಸಲು ಕನಿಷ್ಟ ಒಂದು ತಿಂಗಳು ನಿಗದಿಪಡಿಸಬೇಕು.
2. ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದ ನಂತರ ಮುಂದಿನ 7 ಕೆಲಸದ ದಿನಗಳೊಳಗೆ ಸಮಿತಿ ಸಭೆ ಸೇರಬೇಕು.
3. ಆಯ್ಕೆ ಸಮಿತಿಯ ಎಲ್ಲಾ ಸದಸ್ಯರು ಹಾಜರಾಗಲು ಸಾಧ್ಯವಾಗದಂತಹ ಅನಿವಾರ್ಯ ಕಾರಣಗಳಿದ್ದಲ್ಲಿ ಕನಿಷ್ಟ 2/3ರಷ್ಟು ಸದಸ್ಯರು ಕಡ್ಡಾಯವಾಗಿ ಹಾಜರಿರಬೇಕು.
4. ಆನ್‌ಲೈನ್ ನಲ್ಲಿ ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ಅಂದೇ ಪರಿಶೀಲಿಸುವುದು
5. ಆನ್‌ಲೈನ್ ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆಯನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದು ಮತ್ತು ಅಸ್ಪಷ್ಟ / ಅಪೂರ್ಣ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
6. ಸ್ವೀಕೃತವಾದ ಅರ್ಜಿಗಳನ್ನು ವಿದ್ಯಾರ್ಹತೆಯಲ್ಲಿ ಪಡೆದ ಅಂಕ ಮತ್ತು ಬೋನಸ್ ಅಂಕಗಳನ್ನು ಒಳಗೊಂಡಂತೆ ಪಡೆದ ಒಟ್ಟು ಅಂಕಗಳಿಗನುಸಾರವಾಗಿ ಕ್ರೋಢೀಕೃತ ಪಟ್ಟಿಯನ್ನು ಅನ್ ಲೈನ್ ನಲ್ಲಿ ಸಿದ್ಧಪಡಿಸಿ ಅರ್ಹತೆ ಮತ್ತು ಮೆರಿಟ್‌ಗನುಸಾರವಾಗಿ ಪರಿಶೀಲಿಸಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂದೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು.
7. ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಒಂದು ವಾರ (7 ದಿನಗಳು) ಕಾಲಾವಕಾಶ ನೀಡುವುದು. ಹಾಗೂ ಕಾಲಾವಕಾಶ ಮುಗಿದ ಮುಂದಿನ ಕೆಲಸದ ದಿನವೇ ಸಮಿತಿಯ ಸಭೆ ಕರೆದು ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಕ್ರೋಢೀಕರಿಸಿ ಚರ್ಚಿಸಿ ಕಾರ್ಯಕರ್ತೆ/ ಸಹಾಯಕಿಯರ ಅಂತಿಮ ಆಯ್ಕೆ ಪಟ್ಟಿಯನ್ನು ಅಂದೇ ಸೂಚನಾ ಫಲಕದಲ್ಲಿ ಪ್ರಕಟಿಸುವುದು.
8. ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಕಂಡು ಬಂದಲ್ಲಿ ನೇಮಕಾತಿ ಪ್ರಾಧಿಕಾರವೇ ಚರ್ಚಿಸಿ ನಿಯಮಾನುಸಾರ ಕ್ರಮ ವಹಿಸುವುದು. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.
9. ಆಯ್ಕೆ ನಡವಳಿ ಪುಸ್ತಕದಲ್ಲಿ ಆಯ್ಕೆ ಸಮಿತಿಗೆ ಹಾಜರಾದ ಎಲ್ಲಾ ಸದಸ್ಯರ ಹಾಜರಾತಿ ಪಡೆಯುವುದು. ಆಯ್ಕೆ ಪ್ರಕ್ರಿಯೆ ಮುಗಿದ ನಂತರ ನಡವಳಿಗಳನ್ನು ಸವಿವರವಾಗಿ (speaking order), ಕೇಂದ್ರವಾರು ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು ಯಾವ ಮಾನದಂಡಗಳನ್ವಯ ಆಯ್ಕೆ ಮಾಡಲಾಗಿದೆ? ಎಂಬ ಷರಾದೊಂದಿಗೆ ನಡವಳಿಯಲ್ಲಿ ದಾಖಲಿಸಿ ಯಾವುದೇ ತಿದ್ದುಪಡಿಗಳಿದ್ದಲ್ಲಿ

For more job news visit : www.kpscvaani.com

XIV. ಶಿಸ್ತು ಪ್ರಾಧಿಕಾರ:-

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಕಾರ್ಯನಿರ್ವಹಣೆಯಲ್ಲಿ ಯಾವುದೇ ನ್ಯೂನ್ಯತೆಗಳ ಬಗ್ಗೆ ದೂರುಗಳು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಸ್ವೀಕೃತಗೊಂಡಲ್ಲಿ ಅವುಗಳನ್ನು ಪರಿಶೀಲಿಸಿ ಅವರ ಮೇಲೆ ಶಿಸ್ತುಕ್ರಮ ಕ್ರಮ ಕೈಗೊಳ್ಳಲು ಜಿಲ್ಲಾ ಆಯ್ಕೆ ಸಮಿತಿಗೆ ಅಧಿಕಾರವಿರುತ್ತದೆ. ಅದರಂತೆ, ರಾಜ್ಯಮಟ್ಟದ ಅಧಿಕಾರಿಗಳು ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದಾಗ ನ್ಯೂನ್ಯತೆಗಳು ಕಂಡುಬಂದಲ್ಲಿ ಅವರ ಮೇಲೆ ಶಿಸ್ತುಕ್ರಮ ಕೈಗೊಳ್ಳಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಅಧಿಕಾರವಿರುತ್ತದೆ.

ಜಿಲ್ಲಾ ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿ ಹಾಗೂ ತಾಲ್ಲೂಕು ಮಟ್ಟದ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

XV. ಜಿಲ್ಲಾ/ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ:-

1.ಜಿಲ್ಲಾ ಮಟ್ಟದ ಆಯ್ಕೆ ಸಮಿತಿ:-

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿಯ ಸದಸ್ಯರು.

1	ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2	ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್	ಉಪಾಧ್ಯಕ್ಷರು
3	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು	ಸದಸ್ಯರು
4	ಆಯುಕ್ತರು / ಉಪ ಆಯುಕ್ತರು ನಗರ ಸಭೆ/ ನಗರಪಾಲಿಕೆ / ಮಹಾನಗರ ಪಾಲಿಕೆ / ಬಿ.ಬಿ.ಎಂ.ಪಿ.	ಸದಸ್ಯರು
5	ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ	ಸದಸ್ಯರು
6	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	ಸದಸ್ಯ ಕಾರ್ಯದರ್ಶಿಗಳು

2.ತಾಲ್ಲೂಕು ಮಟ್ಟದ ಪರಿಶೀಲನಾ ಸಮಿತಿ:-

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ

1	ತಹಶೀಲ್ದಾರರು	ಅಧ್ಯಕ್ಷರು
2	ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್	ಉಪಾಧ್ಯಕ್ಷರು
3	ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು	ಸದಸ್ಯರು
4	ಆಯುಕ್ತರು, ಪುರಸಭೆ/ಪಟ್ಟಣ ಪಂಚಾಯತಿ	ಸದಸ್ಯರು
5	ಕ್ಷೇತ್ರ ಶಿಕ್ಷಣಾಧಿಕಾರಿಗಳು	ಸದಸ್ಯರು
6	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು	ಸದಸ್ಯ ಕಾರ್ಯದರ್ಶಿಗಳು

ತಾಲ್ಲೂಕು ಸಮಿತಿಯ ಅರ್ಜಿಗಳನ್ನು ಪರಿಶೀಲಿಸಿದ ಪಟ್ಟಿಯನ್ನು ಉಪ ನಿರ್ದೇಶಕರಿಗೆ ಸಲ್ಲಿಸುವುದು. ಉಪ ನಿರ್ದೇಶಕರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಅರ್ಜಿಗಳನ್ನು ಕ್ರೋಢೀಕರಿಸಿ ಜಿಲ್ಲಾ ಸಮಿತಿಗೆ ಸಲ್ಲಿಸಿ ನಡವಳಿ ಮಾಡುವುದು.

For more job news visit : www.kpscvaani.com

ಇತರೆ ಷರತ್ತುಗಳು:-

- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ ಉಪ ನಿರ್ದೇಶಕರು ಅಭ್ಯರ್ಥಿಗಳು ಕನ್ನಡ ಭಾಷೆಯಲ್ಲಿ ಅರ್ಜಿಗಳನ್ನು ಡೌನ್ ಲೋಡ್ ಮಾಡಲು ಅವಕಾಶ ಕಲ್ಪಿಸುವುದು.
- ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಾಗ ಗ್ರಾಮ ಪಂಚಾಯತ್ ಮತ್ತು ವಾರ್ಡ್ ಮಾತ್ರ ಅಂತರ್ಜಾಲದಲ್ಲಿ ಪ್ರತಿಫಲನವಾಗುತ್ತಿದ್ದು ಗ್ರಾಮದ ಮಾಹಿತಿಯನ್ನು ಅಂತರ್ಜಾಲದ ತಂತ್ರಾಂಶದಲ್ಲಿ ಸೇರಿಸುವುದು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ಉಪ ನಿರ್ದೇಶಕರು ಗ್ರಾಮ/ವಾರ್ಡ್ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಪ್ ಲೋಡ್ ಮಾಡುವುದು.
- ಸರ್ಕಾರದ ಆದೇಶ ದಿನಾಂಕ 18.08.2018ರಂತೆ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಸ್ಥಾನಪಲ್ಲಟ ಕೋರಿದಾಗ ಗೌರವ ಸೇವಾವಧಿಯಲ್ಲಿ 2 ಸ್ಥಾನಪಲ್ಲಟಕ್ಕೆ ಅವಕಾಶವಿದ್ದು, ಒಂದು ಬಾರಿ ಸ್ಥಾನಪಲ್ಲಟ ಮಾಡಿದ ನಂತರ 2ನೇ ಸ್ಥಾನಪಲ್ಲಟಕ್ಕೆ 3 ವರ್ಷಗಳ ಅಂತರವಿರಬೇಕು.

N.S.Khatavkar
03/12/2022

(ನಿರ್ಮಲಾ ಎಸ್. ಖಟಾವ್‌ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇನತರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

3/12

For more job news visit : www.kpscvaani.com

ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 154 ಐಸಿಡಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು. ದಿನಾಂಕ: 18.11.2024

ಮಾರ್ಪಾಡು ಆದೇಶ

ಸರ್ಕಾರದ ಆದೇಶ ಸಂಖ್ಯೆ: ಮಮಇ 154 ಐಸಿಡಿ 2020, ದಿನಾಂಕ:3.12.2022 ರಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಮಾರ್ಗಸೂಚಿ ಕಂಡಿಕೆ VIII(3) ರಲ್ಲಿ ವಿಧವೆಯರನ್ನು ಪರಿಗಣಿಸಲು ಅರ್ಹತೆಯ ಮಾನದಂಡಗಳನ್ನು ಕುರಿತು ತಿಳಿಸಲಾಗಿದೆ. ಸದರಿ ಕಂಡಿಕೆಯಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ವಿಧವೆಯರನ್ನು ಆಯ್ಕೆ ಮಾಡಲು ಇರುವ ಮಾನದಂಡಗಳನ್ನು ಈ ಕೆಳಕಂಡಂತೆ ಮಾರ್ಪಾಡು ಮಾಡಿ ಆದೇಶಿಸಿದೆ. ಸದರಿ ಮಾರ್ಪಾಡು ಆದೇಶವು ಈ ದಿನಾಂಕದ ನಂತರ ಹೊರಡಿಸುವ ನೇಮಕಾತಿ ಅಧಿಸೂಚನೆಗಳಿಗೆ ಅನ್ವಯಿಸುತ್ತದೆ.

ಕ್ರ.ಸಂ	ಈ ಹಿಂದೆ ಇದ್ದ ಮಾರ್ಗಸೂಚಿ	ಪ್ರಸ್ತುತ ಮಾರ್ಪಾಡು ಮಾಡಲಾಗಿರುವ ಮಾರ್ಗಸೂಚಿ
1	ನೇಮಕಾತಿ ಪ್ರಕ್ರಿಯೆಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ +5 ಬೋನಸ್ ಅಂಕಗಳನ್ನು ನೀಡುವುದು. ಮರಣ ಪ್ರಮಾಣಪತ್ರ, ವಿಧವಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.	• ಅಂಗನವಾಡಿ ಕಾರ್ಯಕರ್ತೆ /ಸಹಾಯಕಿಯರ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಆಸಿಡ್ ದಾಳಿಗೆ ಒಳಗಾದವರು ಮತ್ತು ಇಲಾಖಾ ಸಂಸ್ಥೆಗಳ ನಿವಾಸಿಗಳನ್ನು ಹೊರತುಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೇ ಮೂರನೇ ಆದ್ಯತೆ ಮೇರೆಗೆ ನೇರವಾಗಿ ವಿಧವೆಯರನ್ನೇ ಆಯ್ಕೆಮಾಡತಕ್ಕದ್ದು, ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಪರಿಗಣಿಸುವಂತಿಲ್ಲ . • ವಿಧವೆಯರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡತಕ್ಕದ್ದು. • ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುತ್ತಾರೆ, ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು. • ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ. • ವಿಧವೆಯರು ಪತಿಯ ಮರಣ ಪ್ರಮಾಣ ಪತ್ರ ಅಥವಾ ವಿಧವಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.

(ಸಿ. ಬಲರಾಮ್)
ಸರ್ಕಾರದ ಉಪ ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

For more job news visit : www.kpscvaani.com

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಎ ಅಂಡ್ ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
2. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ಎಲ್ಲಾ ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
6. ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು.
7. ಎಲ್ಲಾ ಆಯ್ಕೆ ಸಮಿತಿ ಸದಸ್ಯರು.
8. ಎಲ್ಲಾ ಜಿಲ್ಲಾ ಉಪನಿರ್ದೇಶಕರು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

2. ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.